ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 – 2023

ಗುರುವಾರ, ಅಕ್ಟೋಬರ್ 12, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 150 RNI : 27369/75

janathavani@mac.com
www.janathavani.com
08192 254736 91642 99999



**ಪೊಲೀಸ್ ಕವಾಯತು** ದಾವಣಗೆರೆ: ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಬೆಂಗಳೂರು ಎಡಿಜಿಪಿ (ತರಬೇತಿ) ಅಲೋಕ್ ಕುಮಾರ್ ಪರಿವೀಕ್ಷಣೆ ನಡೆಸಿ, ಗೌರವ ವಂದನೆ ಸ್ವೀಕರಿಸಿದರು. ಕವಾಯತು ತಂಡಗಳ ನಾಯಕಿಯಾಗಿ ಎಸ್ಪಿ ಉಮಾ ಪ್ರಶಾಂತ್, ಉಪ ನಾಯಕರಾಗಿ ಡಿಎಆರ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್ ಇವರು ಕವಾಯತು ನಡೆಸಿಕೊಟ್ಟರು.

## 20 ಸಾವಿರ ಶಿಕ್ಷಕರ ನೇಮಕ

### 500 ಕೆ.ಪಿ.ಎಸ್. ಶಾಲೆಗಳ ಆರಂಭ: ಸಚಿವ ಮಧು ಬಂಗಾರಪ್ಪ

ಬೆಂಗಳೂರು, ಅ.11- ಹೊಸದಾಗಿ 20 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ 500 ಇಂಗ್ಲಿಷ್ ಸರ್ಕಾರಿ ಶಾಲೆ (ಕೆಪಿಎಸ್) ತೆರೆಯುವುದಾಗಿ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 13,500 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿದೆ. ಹೈಕೋರ್ಟ್ ಆದೇಶ ನೀಡಿದ ಕೂಡಲೇ ಇವುಗಳನ್ನು ಭರ್ತಿ ಮಾಡಲಾಗುವುದು ಎಂದರು.

ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಮತ್ತೆ 20 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲು ಮುಖ್ಯಮಂತ್ರಿ ಅವರ



ಅನುಮೋದನೆ ಪಡೆಯಲಾಗುವುದು ಎಂದರು.

ಕೆಪಿಎಸ್ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮವಿದ್ದರೂ ಕನ್ನಡ ಭಾಷೆ ಪ್ರಥಮ ಭಾಷೆ ಕಡ್ಡಾಯವಾಗಿರುತ್ತದೆ. ಗ್ರಾಮೀಣ ಭಾಗದಲ್ಲಿ ಖಾಸಗಿ ಇಂಗ್ಲಿಷ್ ಶಾಲೆಗಳು ಆಕರ್ಷಿತವಾಗಿ ನಮ್ಮ ಸರ್ಕಾರಿ ಕನ್ನಡ ಶಾಲೆಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ಈ ವ್ಯವಸ್ಥೆಗೆ ಕಡಿವಾಣ ಹಾಕಲು ಎರಡು ಗ್ರಾಮ ಪಂಚಾಯ್ತಿಗೆ ಒಂದರಂತೆ ಕರ್ನಾಟಕ ಪಬ್ಲಿಕ್ ಶಾಲೆ ತೆರೆಯಲು ಸರ್ಕಾರ ತೀರ್ಮಾನಿಸಿದೆ.

ಎರಡೂವರೆ ಸಾವಿರ ಕೋಟಿ ರೂ. ವೆಚ್ಚದಲ್ಲಿ ಗ್ರಾಮೀಣ ಭಾಗದ 165 ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರತಿ ಕ್ಷೇತ್ರಕ್ಕೆ ನಾಲ್ಕರಂತೆ 500 ಶಾಲೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವುದಾಗಿ ಹೇಳಿದರು.

ಎಲ್ಲಾ ಮೂಲಸೌಕರ್ಯಗಳನ್ನು ಒಳಗೊಂಡಿರುವ ಈ ಶಾಲೆ ಒಂದೇ ಸೂರಿನಡಿ, ಒಂದರಿಂದ 12ನೇ ತರಗತಿವರೆಗೂ ಕಲಿಯಲು ಅವಕಾಶ ಮಾಡಿಕೊಡಲಾಗುವುದು.

ಕೆಪಿಎಸ್ ಶೈಕ್ಷಣಿಕ ಸಂಸ್ಥೆಯ ಪ್ರದೇಶದ ಸುತ್ತ ಮುತ್ತಲಿನ ಪ್ರವೇಶ ಕೊರತೆ ಇರುವ ನಮ್ಮ ಸರ್ಕಾರಿ ಶಾಲೆಗಳನ್ನು ಇದರೊಂದಿಗೆ ವಿಲೀನ ಮಾಡಲಾಗುವುದು. ಒಟ್ಟಾರೆ 53 ಸಾವಿರ ಶಿಕ್ಷಕರ ಕೊರತೆ (2ನೇ ಪುಟಕ್ಕೆ)

## ಭಾರತದ ಸಾಲ ಸಹ ಚೀನಾದಷ್ಟೇ

**ಅಪಾಯಗಳು ಆ ದೇಶದಷ್ಟಿಲ್ಲ - ಐ.ಎಂ.ಎಫ್**

ವಾಷಿಂಗ್ಟನ್, ಅ. 11 – ಭಾರತ ಸಹ ಚೀನಾದಷ್ಟೇ ಸಾಲ ಹೊಂದಿದೆ. ಆದರೆ, ಸಾಲದ ಜೊತೆಗಿನ ಅಪಾಯಗಳು ಆ ದೇಶದಷ್ಟಿಲ್ಲ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.)ಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತದ ಚಾಲ್ತಿ ಸಾಲ ಸಹ ಹೆಚ್ಚಾಗಿದೆ. ಇದು ಜಿ.ಡಿ.ಪಿ.ಯ ಶೇ.81.9ರಷ್ಟಿದೆ. ಇದಕ್ಕೆ ಹೋಲಿಸಿದರೆ ಚೀನಾ ಸಾಲದ ಪ್ರಮಾಣ ಶೇ.83ರಷ್ಟಿದೆ ಎಂದು ಐ.ಎಂ.ಎಫ್.ನ ವಿತ್ತೀಯ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ರುಡ್ ಡಿ ಮೂಜಿ ಹೇಳಿದ್ದಾರೆ.

2019ರಲ್ಲಿ ಭಾರತದ ಸಾಲದ ಪ್ರಮಾಣ ಶೇ.75ರಷ್ಟಿತ್ತು. ಈ ಲೆಕ್ಕದಲ್ಲಿ ನೋಡಿದಾಗ ಭಾರತದ ಸಾಲ ಹೆಚ್ಚಾಗಿದೆ. ಭಾರತ ಬಡ್ಡಿಯ ಮೇಲೆ ಅತಿ ಹೆಚ್ಚು ವೆಚ್ಚ ಮಾಡಿದೆ. ಜಿ.ಡಿ.ಪಿ.ಯ ಶೇ.5.4ರಷ್ಟು ಹಣ ಬಡ್ಡಿ ರೂಪದಲ್ಲಿ ಹೋಗುತ್ತಿದೆ. ಪ್ರಾಥಮಿಕ ಕೊರತೆಯಾದ ಶೇ.3.4 ಸೇರಿಸಿದರೆ, ಒಟ್ಟಾರೆ ಕೊರತೆ ಶೇ.8.8ರಷ್ಟಾಗುತ್ತದೆ ಎಂದವರು ಹೇಳಿದ್ದಾರೆ.

ಭಾರತದ ಸಾಲ ಚೀನಾದ ವೇಗದಲ್ಲಿ ಏರಿಕೆಯಾಗುವುದಿಲ್ಲ. 2028ರ ವೇಳೆಗೆ ಭಾರತದ ಸಾಲದ ಪ್ರಮಾಣ ಶೇ.1.5ರಷ್ಟು ಇಳಿಕೆಯಾಗಿ ಶೇ.80.4ಕ್ಕೆ ತಲುಪುವ ನಿರೀಕ್ಷೆ ಇದೆ ಎಂದೂ ಅವರು ಹೇಳಿದ್ದಾರೆ.

ಭಾರತದಲ್ಲಿ ಬೆಳವಣಿಗೆ ದರ ಹೆಚ್ಚಾಗಿರುವುದೂ ಸಹ ಸಾಲ ಹೆಚ್ಚಾಗಲು ಕಾರಣವಾಗಿದೆ. ಭಾರತ ದೀರ್ಘಾವಧಿ ಸಾಲಗಳನ್ನು ಹೊಂದಿದೆ. ಇವುಗಳನ್ನು ಪದೇ ಪದೇ ನವೀಕರಿಸಬೇಕಿಲ್ಲ. ಒಟ್ಟಾರೆ ಹಣಕಾಸು ಪರಿಸ್ಥಿತಿ ಮುಖ್ಯವಾಗಿದೆ ಎಂದವರು ಹೇಳಿದ್ದಾರೆ. (2ನೇ ಪುಟಕ್ಕೆ)

## 3 ಸಾವಿರ ಕ್ಯೂಸೆಕ್ಸ್ ನೀರಿಗೆ ಕಾವೇರಿ ಸಮಿತಿ ಸೂಚನೆ

ಮೈಸೂರು, ಅ. 11 – ಮುಂದಿನ ಹದಿನೈದು ದಿನಗಳ ಕಾಲ 3 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ತಮಿಳುನಾಡಿಗೆ ಹರಿಸುವಂತೆ ಕಾವೇರಿ ಜಲ ನಿಯಂತ್ರಣ ಸಮಿತಿ ರಾಜ್ಯಕ್ಕೆ ತಿಳಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆದೇಶ ಏನೇ ಇದ್ದರೂ ರೈತರ ಹಿತ ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ. ಅಕ್ಟೋಬರ್ 16ರಿಂದ ಅಕ್ಟೋಬರ್ 31ರವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ಸ್ ನೀರು ಹರಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಕಾವೇರಿ ಸಮಿತಿ ತಿಳಿಸಿದೆ.

## ಮೇರಾ ಯುವ ಭಾರತ್‌ಗೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ, ಅ. 11 - 'ಮೇರಾ ಯುವ ಭಾರತ್' (ಎಂ.ವೈ. ಭಾರತ್) ಎಂಬ ಸ್ವಾಯತ್ತ ಸಂಸ್ಥೆ ಸ್ಥಾಪನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಯುವಕರ ಅಭಿವೃದ್ಧಿಗೆ ತಂತ್ರಜ್ಞಾನ ಬಳಕೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಯುವಕರ ಆಶಯಗಳನ್ನು ಈಡೇರಿಸಲು ಹಾಗೂ ಯುವಕರ ಅಭಿವೃದ್ಧಿಗೆ ಸಂಪೂರ್ಣ ಸರ್ಕಾರಿ ವೇದಿಕೆ ಒದಗಿಸಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಸಂಪುಟ ಸಭೆಯ ನಂತರ ಮಾತನಾಡಿರುವ ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಈ ಸಂಸ್ಥೆಯನ್ನು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನವಾದ ಅಕ್ಟೋಬರ್ 31ರಂದು ದೇಶಕ್ಕೆ ಲೋಕಾರ್ಪಣೆ ಮಾಡಲಾಗುವುದು. 15-29 ವರ್ಷದ ಯುವ ಪೀಳಿಗೆಯನ್ನು ಗುರಿಯಾಗಿಟ್ಟುಕೊಂಡು ಎಂವೈ ಭಾರತ್ ರೂಪಿಸಲಾಗುವುದು. (4ನೇ ಪುಟಕ್ಕೆ)

## 3 ಖನಿಜಗಳ ರಾಯಧನ ನಿಗದಿ

ನವದೆಹಲಿ, ಅ. 11 – ಲಿಥಿಯಂ ಹಾಗೂ ನಿಯೋಬಿಯಂಗಳಿಗೆ ಶೇ.3 ಮತ್ತು ಅಪರೂಪದ ಖನಿಜಗಳಿಗೆ ಶೇ.1ರ ರಾಯಧನವನ್ನು ನಿಗದಿ ಪಡಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದೇ ಮೊದಲ ಬಾರಿಗೆ ಆ ಖನಿಜಗಳ ಹರಾಜಿಗೂ ದಾರಿ ಮಾಡಿಕೊಟ್ಟಂತಾಗಿದೆ.

## ಕಾಂಗ್ರೆಸ್ ಪಕ್ಷಕ್ಕೆ ಹೊಸಬರು ಬರಬಾರದೆಂಬ ನಿಯಮವಿದೆಯೇ?



**ಲೋಕಸಭಾ ಚುನಾವಣಾ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್ ಪ್ರಶ್ನೆ**

ದಾವಣಗೆರೆ, ಅ.11- ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೊಸಬರು ಬರಬಾರದು ಎಂಬ ನಿಯಮ ಇದೆಯೇ? ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಪ್ರಬಲ ಟಿಕೆಟ್ ಆಕಾಂಕ್ಷಿ ಜಿ. ಬಿ. ವಿನಯ್ ಕುಮಾರ್ ಪ್ರಶ್ನಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು. ಎಲ್ಲರೂ ಪ್ರಜೆಗಳಿಂದಲೇ ನಾಯಕರಾಗಿದ್ದಾರೆ. ಯಾರನ್ನೂ ನೇಮಿಸಿ ನಾಯಕನನ್ನಾಗಿ ಮಾಡಿರುವುದಿಲ್ಲ. ಪ್ರದೀಪ್ ಈಶ್ವರ್ ರಾಜಕಾರಣಿಯೇ ಅಲ್ಲ. ಅವರಿಗೆ ವರಿಷ್ಠರು ಟಿಕೆಟ್ ಕೊಟ್ಟಿದ್ದರು. ಅಲ್ಲಿನ ಕಾರ್ಯಕರ್ತರು ಹೊಸಬರು ಎನ್ನದೆ ಗೆಲ್ಲಿಸಿದರು. ದಾವಣಗೆರೆ ಕ್ಷೇತ್ರದಲ್ಲಿ ಏಕೆ 'ಹೊಸಬ' ಎಂಬ ಮಾತು? ಶಿವಕುಮಾರ್ ಒಡೆಯರ್ ಅವರಿಗೆ ಏಕೆ ಈ ಪ್ರಶ್ನೆ ಕೇಳುವುದಿಲ್ಲ? ಎಂದವರು ಪ್ರಶ್ನಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಯಾರಾದರೂ ಟಿಕೆಟ್ ಆಕಾಂಕ್ಷಿಯಾಗಬಹುದು. ಎಲ್ಲಾ ಆಕಾಂಕ್ಷಿಗಳೂ ಟಿಕೆಟ್‌ಗೆ ಅರ್ಜಿ ಸಲ್ಲಿಸಲಿ. ಜನರ ಬಾಯಲ್ಲಿ ಯಾರ ಹೆಸರು ಬರುತ್ತದೋ ಅವರಿಗೆ ಟಿಕೆಟ್ ನೀಡಲಿ ಎಂದು ವಿನಯ್ ಕುಮಾರ್ ಹೇಳಿದರು.

ಕಳೆದ ಮೂರು ತಿಂಗಳಿನಿಂದ ಪಕ್ಷ ಸಂಘಟನೆ ಮಾಡುತ್ತಿದ್ದೇನೆ. ಜನರ ಸಮಸ್ಯೆ ಅರಿಯುತ್ತಿದ್ದೇನೆ. ಎಲ್ಲಾ ಕಡೆ ನನಗೆ ಬೆಂಬಲ ಸಿಗುತ್ತಿದೆ. ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಸಿಗುತ್ತದೆ ಎಂಬ ಬಲವಾದ ವಿಶ್ವಾಸವಿದೆ ಎಂದು ಹೇಳಿದರು.

ಟಿಕೆಟ್ ಕೊಡದಿದ್ದರೆ ಬೇರೆ ಪಕ್ಷ ಸೇರುವುದಿಲ್ಲ. ಸ್ವತಂತ್ರವಾಗಿಯೂ ಸ್ಪರ್ಧಿಸುವುದಿಲ್ಲ. ಕೊನೆಯ ವರೆಗೂ ಕಾಂಗ್ರೆಸ್‌ನಲ್ಲಿರುತ್ತೇನೆ. ನನಗೆ ಟಿಕೆಟ್ ಕೊಟ್ಟರೆ ಬೇರೆ ನಾಯಕರು ನನ್ನನ್ನು ಬೆಂಬಲಿಸಲಿ, ಬೇರೆಯವರಿಗೆ ಟಿಕೆಟ್ ಸಿಕ್ಕರೆ ಅವರನ್ನು (2ನೇ ಪುಟಕ್ಕೆ)

## ಕರ್ನಾಟಕ ಶಿಕ್ಷಣ ನೀತಿಗಾಗಿ ಪರಿಣಿತರ ಸಮಿತಿ ರಚನೆ

ಬೆಂಗಳೂರು, ಅ. 11 – ಕರ್ನಾಟಕ ರಾಜ್ಯ ಶಿಕ್ಷಣ ನೀತಿ ರೂಪಿಸುವ ಸಲುವಾಗಿ ರಾಜ್ಯ ಸರ್ಕಾರ ಪರಿಣಿತರ ಸಮಿತಿಯೊಂದನ್ನು ರಚಿಸಿದೆ. 15 ಸದಸ್ಯರ ಸಮಿತಿ ರಚಿಸಿ ರಾಜ್ಯ ಸರ್ಕಾರ ಆದೇಶವೊಂದನ್ನು ಹೊರಡಿಸಿದೆ. ಎಂಟು ವಿಷಯ ಪರಿಣಿತರ ಪ್ರತ್ಯೇಕ ಸಮಿತಿಯನ್ನು ಸಲಹೆ ನೀಡಲು ರಚಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಜಾಗದಲ್ಲಿ ಕರ್ನಾಟಕ ಶಿಕ್ಷಣ ನೀತಿ ಜಾರಿಗೆ ತರಲು ನಿರ್ಧರಿಸಲಾಗಿದೆ. ಯು.ಜಿ.ಸಿ. ಮಾಜಿ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್ ಅವರು ರಾಜ್ಯ ಶಿಕ್ಷಣ ನೀತಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು 2024ರ ಫೆಬ್ರವರಿ 28ರ ಒಳಗಾಗಿ ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

## ರಾಜಸ್ಥಾನ : ಮತದಾನ ಮುಂದೂಡಿಕೆ

ನವದೆಹಲಿ, ಅ. 11- ರಾಜಸ್ಥಾನದಲ್ಲಿ ನವೆಂಬರ್ 23ರಂದು ದೊಡ್ಡ ಪ್ರಮಾಣದಲ್ಲಿ ಮದುವೆಗಳು ನಡೆಯಲಿರುವ ಕಾರಣಕ್ಕಾಗಿ, ಆ ದಿನದಂದು ನಡೆಸಲು ಉದ್ದೇಶಿಸಿದ್ದ ವಿಧಾನಸಭಾ ಚುನಾವಣೆಯ ಮತದಾನವನ್ನು ನವೆಂಬರ್ 25ಕ್ಕೆ ಮುಂದೂಡಲಾಗಿದೆ.

ಈ ಬಗ್ಗೆ ಚುನಾವಣಾ ಆಯೋಗ ಹೇಳಿಕೆ ನೀಡಿದ್ದು, ಮದುವೆಗಳ ಕಾರಣದಿಂದ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಮತದಾನ ಮುಂದೂಡಲಾಗಿದೆ ಎಂದು ತಿಳಿಸಿದೆ. ನವೆಂಬರ್ 23ರಂದು ದೇವ ಅತಾನಿ ಏಕಾದಶಿ ಇದ್ದು, ಅಂದು ರಾಜ್ಯದಲ್ಲಿ 50 ಸಾವಿರ ಮದುವೆಗಳು ನಡೆಯಲಿವೆ ಎಂದು ಅಂದಾಜಿಸಲಾಗಿತ್ತು.

## ದಾಳಿಯಲ್ಲಿ ನಾಶವಾಗುತ್ತಿರುವ ಗಾಜಾ ಬಡಾವಣೆಗಳು

ಜೆರುಸಲೇಂ, ಅ. 11 – ಇಸ್ರೇಲ್ ದಾಳಿಗೆ ಸಿಲುಕಿ ಪ್ಯಾಲೆಸ್ತೇನಿನ ಗಾಜಾ ಪಟ್ಟಿಯ ಇಡೀ ಬಡಾವಣೆಗಳು ನಾಶವಾಗಿವೆ. ಆಸ್ಪತ್ರೆಗಳಲ್ಲಿ ಅಗತ್ಯ ವಸ್ತುಗಳ ಪೂರೈಕೆ ಕಡಿಮೆಯಾಗಿದೆ ಹಾಗೂ ವಿದ್ಯುತ್ ಕಡಿತದ ಅಪಾಯ ಎದುರಾಗಿದೆ.

ಈ ಹಿಂದೆ ಸಂಘರ್ಷ ನಡೆದಾಗ ಇಸ್ರೇಲ್ ನಿರ್ದಿಷ್ಟ ಕಟ್ಟಡವನ್ನು ಮಾತ್ರ ನಾಶ ಮಾಡುತ್ತಿತ್ತು. ಆ ನಿರ್ದಿಷ್ಟ ಕಟ್ಟಡದ ಬಗ್ಗೆ ಎಚ್ಚರಿಕೆಯ ಸಂದೇಶ ನೀಡಿ ಜನರು ಹೊರ ಹೋಗುವಂತೆ ತಿಳಿಸುತ್ತಿತ್ತು.

ಈ ಬಾರಿ ತನ್ನ ದಾಳಿಯ ಸ್ವರೂಪವನ್ನು ಇಸ್ರೇಲ್ ಬದಲಿಸಿಕೊಂಡಿದೆ. ಕಟ್ಟಡವೊಂದರ ಬದಲು ಇಡೀ ಬಡಾವಣೆಗಳನ್ನೇ ಗುರಿಯಾಗಿಟ್ಟುಕೊಂಡು ದಾಳಿ ನಡೆಸುತ್ತಿದೆ. ಇದರಿಂದಾಗಿ ಇಡೀ ಗಾಜಾ ಪಟ್ಟಿಯ ಕಟ್ಟಡಗಳೇ ನೆಲಸಮವಾಗುವ ಅಪಾಯ ಎದುರಾಗಿದೆ. ಗಾಜಾದಲ್ಲಿ ಈಗ ಯಾವುದೇ ಸುರಕ್ಷಿತ ಸ್ಥಳ ಉಳಿದಿಲ್ಲ ಎಂದು ಜನರು ದೂರುತ್ತಿದ್ದಾರೆ.

ಈ ಬಾರಿಯ ಯುದ್ಧದ ಗುರಿ ಹಿಂದಿಗಿಂತ ಭಿನ್ನವಾಗಿದೆ. ಈ ಬಾರಿ ಸ್ಪಷ್ಟ ಗೆಲುವು ಬೇಕಿದೆ



### ರಕ್ಷಣಾ ಕಾರ್ಯಾಚರಣೆಗೂ ಪರದಾಡುವ ಸ್ಥಿತಿ ನಿರ್ಮಾಣ

ಎಂದು ಇಸ್ರೇಲ್‌ನ ಮಾಜಿ ರಾಷ್ಟ್ರೀಯ ಭದ್ರತಾ ಉಪ ಸಲಹೆಗಾರ ಚಕ್ ಫ್ರೆಲಿಚ್ ಹೇಳಿದ್ದಾರೆ.

ಈಗ ನಡೆಸಲಾಗುತ್ತಿರುವ ಯುದ್ಧವು ಪರಿಸ್ಥಿತಿಯನ್ನು ಮೂಲಭೂತವಾಗಿ ಬದಲಿಸಲಿದೆ ಎಂದವರು ಹೇಳಿದ್ದಾರೆ.

ಇಸ್ರೇಲ್ ದಾಳಿಯಿಂದಾಗಿ ಗಾಜಾ ನಗರದ ಅಲ್ - ಕರಮ ಪ್ರದೇಶ ಸಂಪೂರ್ಣ ನಾಶವಾಗಿದೆ. ದೊಡ್ಡ ಸಂಖ್ಯೆಯ ಜನರು ಹತರಾಗಿದ್ದಾರೆ ಹಾಗೂ ಗಾಯಗೊಂಡಿದ್ದಾರೆ. ಎಲ್ಲ ರಸ್ತೆಗಳು ನಾಶವಾಗಿರುವ ಕಾರಣ ವೈದ್ಯಕೀಯ ತಂಡಗಳು ಅಲ್ಲಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ರಕ್ಷಣಾ ಅಧಿಕಾರಿಗಳೂ ಸಹ ಪ್ರದೇಶಕ್ಕೆ ತೆರಳಲು (4ನೇ ಪುಟಕ್ಕೆ)

## ಇಸ್ರೇಲ್‌ನಲ್ಲಿ ಸಮರ ಸರ್ಕಾರ ಸ್ಥಾಪನೆ

ಜೆರುಸಲೇಂ, ಅ. 11 – ಹಮಾಸ್ ವಿರುದ್ಧದ ಯುದ್ಧದ ಹಿನ್ನೆಲೆಯಲ್ಲಿ ಇಸ್ರೇಲ್‌ನಲ್ಲಿ ಪ್ರತಿಪಕ್ಷಗಳನ್ನೂ ಒಳಗೊಂಡ ಸಮರ ಸರ್ಕಾರ ಸ್ಥಾಪಿಸಲಾಗಿದೆ.

ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರ ನೂತನ ಸಮರ ಸಂಪುಟದಲ್ಲಿ ಪ್ರತಿಪಕ್ಷದ ಹಿರಿಯ ನಾಯಕ ಬೆನ್ನಿ ಗಾಂಟ್ಸ್ ಹಾಗೂ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಸೇರ್ಪಡೆಯಾಗಿದ್ದಾರೆ. ಈ ಸಂಪುಟ ಕೇವಲ ಯುದ್ಧದ ವಿಷಯಗಳನ್ನು ಮಾತ್ರ ಪರಿಗಣಿಸಲಿದೆ. ಇತ್ತೀಚಿನ ವರ್ಷಗಳಲ್ಲಿ ಇಸ್ರೇಲ್‌ನಲ್ಲಿ ತೀವ್ರ ಆಂತರಿಕ ಬಿಕ್ಕಟ್ಟು ಉಂಟಾಗಿತ್ತು. ಆಂತರಿಕ ಭಿನ್ನಾಭಿಪ್ರಾಯಗಳ ಬದಿಗೊತ್ತಿ ಸಮರ ಸಂಪುಟ ರಚಿಸಲಾಗಿದೆ.

ಇಸ್ರೇಲ್ ಪ್ರಧಾನ ಪ್ರತಿಪಕ್ಷದ ನಾಯಕ ಯೇರ್ ಲಿಪಿಡ್ ಅವರನ್ನು ನೂತನ ಸಂಪುಟಕ್ಕೆ ಆಹ್ವಾನಿಸಲಾಗಿತ್ತು. ಅವರು ತಕ್ಷಣಕ್ಕೆ ಈ ಬಗ್ಗೆ ಸ್ಪಂದಿಸಿಲ್ಲ.

## ವಿ.ವಿ. ಉನ್ನತ ಶಿಕ್ಷಣ ಸಂಸ್ಥೆಗಳು ವಿವರ ಪ್ರಕಟಿಸಲು ಸೂಚನೆ

ನವದೆಹಲಿ, ಅ. 11- ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಎಲ್ಲ ಅಗತ್ಯ ವಿವರಗಳನ್ನು ವೆಬ್ ತಾಣದಲ್ಲಿ ಪ್ರಕಟಿಸಬೇಕು ಎಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ.) ತಿಳಿಸಿದೆ.

ವಿಶ್ವವಿದ್ಯಾಲಯ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಕನಿಷ್ಠ ಮಾಹಿತಿಯನ್ನೂ ಒದಗಿಸುತ್ತಿಲ್ಲ. ಕೆಲವು ಸಂಸ್ಥೆಗಳ ವೆಬ್ ತಾಣಗಳೇ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಪೇಟೆಂಟ್‌ಗಳು, ವಿದೇಶಿ ಹಾಗೂ ಕೈಗಾರಿಕಾ ಸಹಭಾಗಿತ್ವ, ಆಂತರಿಕ ಗುಣಮಟ್ಟ ಖಾತ್ರಿ ದಳ, ರ‍್ಯಾಗಿಂಗ್ ವಿರೋಧಿ ದಳದ ಸಹಾಯವಾಣಿ, ಸಮಾನ ಅವಕಾಶಗಳ ದಳ, ಶುಲ್ಕ ವಿನ್ಯಾಸ, ರೀಫಂಡ್ ನೀತಿ, ಹಾಸ್ಟೆಲ್ ಸೌಲಭ್ಯ, ವಿದ್ಯಾರ್ಥಿ ವೇತನ, ಶ್ರೇಯಾಂಕ ಹಾಗೂ ಮಾನ್ಯತೆ ಸೇರಿದಂತೆ ವಿವರಗಳನ್ನು ವೆಬ್ ತಾಣಗಳಲ್ಲಿ ಪ್ರಕಟಿಸಬೇಕು ಎಂದು ತಿಳಿಸಲಾಗಿದೆ.

## ಕೇಸರಿ ಧ್ವಜ ಕಟ್ಟುವಾಗ ಕ್ರೇನ್ ಹರಿದು ಯುವಕ ಸಾವು



ದಾವಣಗೆರೆ, ಅ.11- ಹಿಂದೂ ಮಹಾಗಣಪತಿ ಶೋಭಾಯಾತ್ರೆ ಸಿದ್ಧತೆ ವೇಳೆ ಅವಘಡ ಸಂಭವಿಸಿದ್ದು, ಕೇಸರಿ ಧ್ವಜ ಕಟ್ಟುವಾಗ ಕ್ರೇನ್ ಹರಿದು ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವಂತಹ ಘಟನೆ ನಗರದ ಪಿಬಿ ರಸ್ತೆಯ ರೇಣುಕಾ ಮಂದಿರದ ಬಳಿ ನಡೆದಿದೆ.

ಬಸವರಾಜಪೇಟೆ ನಿವಾಸಿ ಪೃಥ್ವಿರಾಜ್(26) ಮೃತ ದುರ್ದೈವಿ. ಈರಣ್ಣ ರಕ್ಕಸಗಿ ಹಾಗೂ ರತ್ನಮ್ಮ ಅವರ ಏಕೈಕ ಪುತ್ರನಾಗಿದ್ದು, ಪ್ಲಂಬರ್ ಕೆಲಸ ಮಾಡಿಕೊಂಡು, ಕುಟುಂಬ ನಿರ್ವಹಣೆ (2ನೇ ಪುಟಕ್ಕೆ)



### ಬೃಹತ್ ಬೈಕ್ ರ‍್ಯಾಲಿ ರದ್ದು

ದಾವಣಗೆರೆ, ಅ.11- ನಗರದ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನಾ ಶೋಭಯಾತ್ರೆ ಹಿನ್ನೆಲೆಯಲ್ಲಿ ಗುರುವಾರ ಆಯೋಜಿಸಿದ್ದ ಬೃಹತ್ ಬೈಕ್ ರ‍್ಯಾಲಿ ರದ್ದುಪಡಿಸಲಾಗಿದೆ. ಕಾರಣಾಂತರಗಳಿಂದ ಬೈಕ್ ರ‍್ಯಾಲಿ ರದ್ದು ಮಾಡಲಾಗಿದ ಎಂದು ಟ್ರಸ್ಟ್ ನ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು ತಿಳಿಸಿದ್ದಾರೆ.

## ಪದವಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆ ಕಡ್ಡಾಯ : ಯು.ಜಿ.ಸಿ.

ನವದೆಹಲಿ, ಅ. 11 – ಪದವಿ ವಿದ್ಯಾರ್ಥಿಗಳು ಪ್ರಾಯೋಗಿಕ ಕಲಿಕೆಯಲ್ಲಿ ತೊಡಗುವುದನ್ನು ಕಡ್ಡಾಯಗೊಳಿಸಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ.) ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಈ ಕ್ರಮ ತೆಗೆದುಕೊಳ್ಳಲಾಗಿದೆ. ಪದವಿ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ವಿಷಯಗಳನ್ನು ತಿಳಿದುಕೊಳ್ಳಲು ಈ ಕ್ರಮ ನೆರವಾಗಲಿದೆ.

ಪದವಿ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಅಂಕಗಳನ್ನೂ ನೀಡಲಾಗುವುದು. ನಾಲ್ಕನೇ ಸೆಮಿಸ್ಟರ್ ಅವಧಿಯಲ್ಲಿ 60ರಿಂದ 120 ಗಂಟೆಗಳ ಅವಧಿಗೆ ಪ್ರಾಯೋಗಿಕ ಕಲಿಕೆಗೆ ಅವಕಾಶ ಕಲ್ಪಿಸಬೇಕಿದೆ.

## ಹರಗನಹಳ್ಳಿ ಡಾ.ಸಿ.ಮಂಜುನಾಥ್ ನಿಧನ



ಹೊನ್ನಾಳಿ ತಾಲ್ಲೂಕು, ಹರಗನಹಳ್ಳಿ ಗ್ರಾಮದ ಮೇಘಾಲಯದ ಶಿಲ್ಲಾಂಗ್‌ನಲ್ಲಿ Secretary of Government of Megahalaya Animal Husbandry & Veterinary Departmentನಲ್ಲಿ ಕೆಲಸ ನಿರ್ವಹಿಸುತ್ತಿದ್ದ **ಡಾ. ಸಿ. ಮಂಜುನಾಥ್** ಇವರು ದಿನಾಂಕ 10.10.2023ರ ಮಂಗಳವಾರ ಸಂಜೆ 5.30ಕ್ಕೆ ಮೇಘಾಲಯದ ಶಿಲ್ಲಾಂಗ್‌ನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 42 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. **ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು ಹರಗನಹಳ್ಳಿ ಗ್ರಾಮಕ್ಕೆ ತರಲಾಗುತ್ತಿದ್ದು, ದಿನಾಂಕ 12.10.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹೊನ್ನಾಳಿ ತಾಲ್ಲೂಕು ಹರಗನಹಳ್ಳಿ** ಗ್ರಾಮದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **ವಸಂತ ನಾಯಕ್ ಮತ್ತು ಕೊಡಗನೂರು ನಾಗಪ್ಪನವರ ವಂಶಸ್ಥರು. ಮೊ : 94481 78072**

## ಮಂಜುಳಾ ಎಲೆಕ್ಟ್ರಾನಿಕ್ಸ್ ಮಾಲೀಕರಾದ ಮಂಜುಳಾ ವಿ.ಎಂ. ನಿಧನ



ದಾವಣಗೆರೆ ನಿಟುವಳ್ಳಿ ರಸ್ತೆ ಜಯದೇವ ಸರ್ಕಲ್ ಹತ್ತಿರದ ವಾಸಿ, ವೀರಭದ್ರಪ್ಪ ಮದ್ದನಕುಂಟೆ ಇವರ ಪತ್ನಿ ಮಂಜುಳಾ ಎಲೆಕ್ಟ್ರಾನಿಕ್ಸ್ ಮಾಲೀಕರಾದ **ಶ್ರೀಮತಿ ಮಂಜುಳಾ ವಿ.ಎಂ.** ಅವರು ದಿನಾಂಕ 11-10-2023ರ ಬುಧವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 59 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12-10-2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ಗ್ಲಾಸ್‌ಹೌಸ್ ಹತ್ತಿರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ,
ಮೊ. : 99803 76176, 8277009166

# ಬರ ಪೀಡಿತ ಜಿಲ್ಲೆಗೆ 119 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ

## ಹರಿಹರದಲ್ಲಿನ ಕಾಮಗಾರಿಗಳ ಪರಿಶೀಲನೆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್



ಹರಿಹರ, ಅ,11- ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳು ಎಂದು ಈಗಾಗಲೇ ಸರ್ಕಾರ ಘೋಷಣೆ ಮಾಡಿದ್ದರಿಂದ 119 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ. ಅನುದಾನ ಬಿಡುಗಡೆ ಮಾಡಿದ ತಕ್ಷಣವೇ ರೈತರಿಗೆ ಪರಿಹಾರ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಹೇಳಿದರು.

ನಗರದ ವಿದ್ಯಾನಗರ, ಇಂದ್ರಾನಗರ, ಬೆಂಕಿನಗರ ಬಡಾವಣೆಯಲ್ಲಿ ನಗರೋತ್ಥಾನ ಯೋಜನೆಯಡಿ ನಡೆಯುತ್ತಿರುವ ಚರಂಡಿ, ರಸ್ತೆ ಕಾಮಗಾರಿಯ ಗುಣಮಟ್ಟ ವೀಕ್ಷಿಸಿದ ನಂತರ ಅವರು 'ಜನತಾವಾಣಿ' ಯೊಂದಿಗೆ ಮಾತನಾಡಿದರು.

ಕೇಂದ್ರ ಬರ ಅಧ್ಯಯನ ತಂಡ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ವರದಿ ಸಿದ್ದತೆ ಮಾಡಿ ಕಳಿಸಲಾಗಿದೆ ಎಂದು ಅವರು ಹೇಳಿದರು.

ಬೆಂಕಿನಗರದ ಚಾನೆಲ್ ನಲ್ಲಿ ಕಸಕಡ್ಡಿ, ಗಿಡಗಳು ಹೆಚ್ಚಾಗಿ ಬೆಳೆದು ನೀರು ಸರಾಗವಾಗಿ ಹರಿಯದೇ ಬಡಾವಣೆಗಳಿಗೆ ನೀರು ನುಗ್ಗುವ ಸಾಧ್ಯತೆ ಇರುತ್ತದೆ. ತಕ್ಷಣವೇ ಚಾನೆಲ್ ನಲ್ಲಿ ಕಟ್ಟಿಕೊಂಡಿರುವ ಕಸ ಮತ್ತು ಗಿಡಗಳನ್ನು ಜೆಸಿಬಿ ಯಂತ್ರದ ಮೂಲಕ ಶೀಘ್ರದಲ್ಲಿ ಸ್ವಚ್ಛತೆಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಡೆ ಗೋಡೆ ನಿರ್ಮಾಣ ವಿಚಾರಕ್ಕೆ ಸಂಬಂಧಿಸಿದಂತೆ ನೀರಾವರಿ ಇಲಾಖೆಯ ಅಧಿಕಾರಿಗಳ ಬಳಿ ಚರ್ಚಿಸಿ ತದ ನಂತರ ತಡೆಗೋಡೆ ನಿರ್ಮಿಸಲು ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ನಗರದ ತುಂಗಭದ್ರಾ ನದಿಯ ಹತ್ತಿರ ಇರುವ ದರ್ಗಾ ಮುಂಭಾಗದ ರಸ್ತೆ ಕಾಮಗಾರಿ ವಿಚಾರಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್ ಮತ್ತು ಪೌರಾಯುಕ್ತರ ಬಳಿ ಸಮಸ್ಯೆಯ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಿ ಆದಷ್ಟು ಬೇಗ ಪರಿಹರಿಸಲು ಮುಂದಾಗುವುದಾಗಿ ಹೇಳಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಫೆಬ್ರವರಿ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉಲ್ಬಣಗೊಳುವ ಸಾಧ್ಯತೆಗಳು ಹೆಚ್ಚು .ಹಾಗಾಗಿ ಸ್ಥಳ ಪರಿಶೀಲನೆ ನಡೆಸಿ ಪ್ರತಿವಾರ ಸಭೆ ಏರ್ಪಡಿಸಲಾಗುತ್ತದೆ. ಮೊದಲು ಬೋರ್‌ವೆಲ್ ನೀರು, ಚಾನೆಲ್, ಹೊಸ ಬೋರ್‌ವೆಲ್ ಹಾಕಿಸೋದು, ಬೋರ್‌ವೆಲ್ ಬಾಡಿಗೆ ಪಡೆದು ಸರಬರಾಜು ಮಾಡುವುದು. ಅದು ಆಗದೆ ಇದ್ದಾಗ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಮೂಲಕ ಕುಡಿಯುವ ನೀರಿಗೆ ಆದ್ಯತೆ ನೀಡಲಾಗುತ್ತದೆ ಎಂದರು.

ಡಿ.ಆರ್.ಎಂ. ಪ್ರೌಢಶಾಲೆ ಶಿಥಿಲವಾಗಿದ್ದು, ಕಟ್ಟಡ ನೆಲಸಮ ಮಾಡುವುದಕ್ಕೆ 2019 ರಲ್ಲಿ ಸರ್ಕಾರವು ಆದೇಶ ನೀಡಲಾಗಿದ್ದರೂ ಸಹ ಇದುವರೆಗೂ ಶಾಲೆಯನ್ನು ನೆಲಸಮ ಮಾಡಿರುವುದಿಲ್ಲ ಎಂಬ ವಿಚಾರಕ್ಕೆ ಶಾಲೆಗೆ ಸಂಬಂಧಿಸಿದ ಅಧಿಕಾರಿಗಳ ಬಳಿ ಚರ್ಚಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ನಗರ ಅಭಿವೃದ್ಧಿ ಯೋಜನಾಧಿಕಾರಿ ಮಹಾಂತೇಶ್, ಇಂಜಿನಿಯರ್ ಮಂಜುನಾಥ್, ತಹಶಿಲ್ದಾರ್ ಪೃಥ್ವಿ ಸಾನಿಕಂ ಪೌರಾಯುಕ್ತ ಐಗೂರು ಬಸವರಾಜ್, ಎಇಇ ತಿಪ್ಪೇಸ್ವಾಮಿ, ಇಂಜಿನಿಯರ್ ಮಂಜುಳಾ, ಕಾಂಗ್ರೆಸ್ ಮುಖಂಡ ದಾದಾಪೀರ್ ಭಾನುವಳ್ಳಿ, ಜೆಡಿಸ್ ಮುಖಂಡ ಬಾಷಾ, ಸದ್ದಾಂ, ಮಕ್ರಿ ಪಾಲಾಕ್ಷಪ್ಪ, ವಿ.ಎ. ಸಮೀರ್, ಪೊಲೀಸ್ ನವೀನ್ ಬೆಳ್ಳೂಡಿ, ನಗರಸಭೆ ಸಂತೋಷ, ಅಕ್ಬರ್ ಸಾಬ್ ಇತರರು ಹಾಜರಿದ್ದರು.

# ಭಾರತದ ಸಾಲ ಸಹ ಚೀನಾದಷ್ಟೇ

**(1ನೇ ಪುಟದಿಂದ)** ಭಾರತದ ದೇಶೀಯ ಸಾಲದ ಪ್ರಮಾಣ ಹೆಚ್ಚಾಗಿದೆ. ಇಂತಹ ಹಲವಾರು ಕಾರಣಗಳಿಂದ ಭಾರತದ ಸಾಲದ ಅಪಾಯ ಚೀನಾಗೆ ಹೋಲಿಸಿದರೆ ಕಡಿಮೆ ಇದೆ ಎಂದವರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ಮಟ್ಟದಲ್ಲಿ ಸಾಲದ ಪ್ರಮಾಣ ಹೆಚ್ಚಾಗಿದೆ. ಕೆಲ ರಾಜ್ಯಗಳು ತೀರಾ ಹೆಚ್ಚಿನ ಪ್ರಮಾಣದ ಸಾಲ ಹೊಂದಿವೆ ಹಾಗೂ ಅತಿ ಹೆಚ್ಚಿನ ಬಡ್ಡಿ ಹೊರೆಯಲ್ಲಿವೆ. ಇದು ಭಾರತಕ್ಕೆ ಗಣನೀಯ ಸಮಸ್ಯೆಯ ವಿಷಯವಾಗಿದೆ ಎಂದು ಮೂಜಿ ಹೇಳಿದ್ದಾರೆ.

ಈ ಸಮಸ್ಯೆ ಬಗೆಹರಿಸಿಕೊಳ್ಳಬೇಕಾದರೆ ಭಾರತ ಮಧ್ಯಾವಧಿಯಲ್ಲಿ ವಿತ್ತೀಯ ಸದೃಢತೆಯ ಯೋಜನೆ ಹೊಂದಬೇಕು. ಉತ್ತಮ ವಿತ್ತೀಯ ನಿಯಮ ಹಾಗೂ ಚೌಕಟ್ಟುಗಳನ್ನು ರೂಪಿಸಿಕೊಳ್ಳಬೇಕು ಎಂದವರು ತಿಳಿಸಿದ್ದಾರೆ. ಭಾರತದ ಸಾಲದ ಪ್ರಮಾಣ ಜಿ.ಡಿ.ಪಿ.ಯ ಶೇ.80ಕ್ಕಿಂತ ಕಡಿಮೆ ಯಾಗುವ ಸಾಧ್ಯತೆ ಇಲ್ಲ. ಕನಿಷ್ಠ ಪಕ್ಷ ಆ ಪ್ರಮಾಣದಲ್ಲಾದರೂ ಸಾಲ ಮುಂದುವರೆಸಿದರೆ, ಬಡ್ಡಿಯ ಹೊರೆ ಜಿ.ಡಿ.ಪಿ.ಯ ಶೇ.5.4 ರಷ್ಟಿರಲಿದೆ ಎಂದವರು ತಿಳಿಸಿದ್ದಾರೆ.

# ಒಂದೆಡೆ ರೈತರಿಗೆ ವಿದ್ಯುತ್ ಆಘಾತ; ಇನ್ನೊಂದೆಡೆ ಕಾವೇರಿ ಬವಣೆ

## ತಮಿಳುನಾಡಿಗೆ ಕಾವೇರಿ ನೀರು ಬಿಡಲ್ಲ ಎನ್ನುವ ಎದೆಗಾರಿಕೆ ಸರ್ಕಾರಕ್ಕೆ ಇಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಕಿಡಿ

ಬೆಂಗಳೂರು, ಅ. 11 - ತಮಿಳುನಾಡಿಗೆ ಮತ್ತೆ ಮುಂದಿನ 15 ದಿನಗಳ ಕಾಲ ನಿತ್ಯ 3000 ಕ್ಯೂಸೆಕ್ ನೀರು ಹರಿಸಲು ಕಾವೇರಿ ಜಲ ನಿಯಂತ್ರಣ ಸಮಿತಿ ರಾಜ್ಯಕ್ಕೆ ಆದೇಶ ನೀಡಿರುವ ಬಗ್ಗೆ ಮಾಜಿ ಸಿಎಂ ಹೆಚ್. ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು; ಮಳೆಯ ಕೊರತೆಯಿಂದ ಜಲಾಶಯಗಳೆಲ್ಲ ಖಾಲಿ ಆಗಿದ್ದರೂ ಕರ್ನಾಟಕಕ್ಕೆ ಬರೆಯ ಮೇಲೆ ಬರೆ ಎಳೆಯಲಾಗುತ್ತದೆ. ಕಾವೇರಿ ಜಲ ನಿಯಂತ್ರಣ ಸಮಿತಿ (CWRC) ಮುಂದಿನ 15 ದಿನಗಳ ಕಾಲ ನಿತ್ಯ 3,000 ಕ್ಯೂಸೆಕ್ ನೀರು ತಮಿಳುನಾಡಿಗೆ ಹರಿಸುವಂತೆ ಮತ್ತೆ ಆದೇಶ ನೀಡಿರುವುದು ರಾಜ್ಯಕ್ಕೆ ಇನ್ನೊಂದು ದೊಡ್ಡ ಆಘಾತ. ಇಂಥ ಜಲಾಘಾತಗಳನ್ನು ಕೊಡುವುದಕ್ಕೆ ಪ್ರಾಧಿಕಾರ ಮತ್ತು ನಿಯಂತ್ರಣ ಸಮಿತಿಗಳನ್ನು ರಚನೆ ಮಾಡಿಕೊಂಡಿದ್ದಾರೆಯೇ ಎನ್ನುವ ಅನುಮಾನ ನಮ್ಮದು ಎಂದು ಅವರು ಹೇಳಿದ್ದಾರೆ.

ಈ ಆದೇಶಗಳು ಸಂವಿಧಾನ ಹಾಗೂ ಒಕ್ಕೂಟದ ಆಶಯಗಳಿಗೆ ವಿರುದ್ಧವಾಗಿವೆ. ಮಾತ್ರವಲ್ಲ, ಕನ್ನಡಿಗರ ತಾಳ್ಮೆ, ಸಹನೆ ಪರೀಕ್ಷೆ ಮಾಡುವಂತಿವೆ. ಈ ಆದೇಶ ಕರ್ನಾಟಕದ ಹಿತಾಸಕ್ತಿಗೆ ಮರಣ ಶಾಸನ. ಬೆಂಗಳೂರು ಜನ ಕುಡಿಯುವ ನೀರಿನ ಬಿಕ್ಕಟ್ಟು ಎದುರಿಸುತ್ತಿದ್ದಾರೆ. ಕಾವೇರಿ ಕೊಳ್ಳದ ರೈತರ ಒಂದು ಬೆಳೆಗೂ ಸಮರ್ಪಕವಾಗಿ ನೀರು ಹರಿದಿಲ್ಲ. ಹೀಗಿದ್ದರೂ ರಾಜ್ಯಕ್ಕೆ ಆದೇಶದ ಮೇಲೆ ಆದೇಶ ನೀಡಿ ಸಮಾನ ನ್ಯಾಯ ತತ್ವವನ್ನು ನಾಮಾವಶೇಷ ಮಾಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕನ್ನಡಿಗರೂ ಮನುಷ್ಯರು, ಅವರಿಗೂ ಅನ್ನ ನೀರು ಬೇಕು. ಅವರೂ ಈ ಒಕ್ಕೂಟ ವ್ಯವಸ್ಥೆಯ ಭಾಗ ಎನ್ನುವುದನ್ನು ಸಮಿತಿ ಮರೆತಿರುವಂತಿದೆ. ಸರಕಾರದಿಂದ ಕಾವೇರಿ ಹಿತರಕ್ಷಣೆ ಸಾಧ್ಯವಿಲ್ಲ. ಈ ಆದೇಶವನ್ನು ಧಿಕ್ಕರಿಸುವ ಎದೆಗಾರಿಕೆ ಸರ್ಕಾರಕ್ಕೆ ಇಲ್ಲ. ಜನರು ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕು, ಜನರ ಜತೆ ನಾವಿದ್ದೇವೆ, ನಮ್ಮ ಪಕ್ಷವೂ ಇದೆ ಎಂದು ಅವರು ಹೇಳಿದ್ದಾರೆ.

ಒಂದು ಕಡೆ ವಿದ್ಯುತ್ ಆಘಾತದಿಂದ ರೈತರು ಕಂಗೆಟ್ಟಿದ್ದಾರೆ. ಮತ್ತೊಂದೆಡೆ ಕಾವೇರಿ ಬವಣೆ ರಾಜ್ಯವನ್ನು ಹಿಂಡಿಹಿಪ್ಪೆ ಮಾಡುತ್ತಿದೆ. ಕನ್ನಡಿಗರ ಕಣ್ಣೀರು ಹರಿದರೂ ಚಿಂತೆ ಇಲ್ಲ, ತಮಿಳುನಾಡಿಗೆ ಕಾವೇರಿ ಹರಿಯಲಿ ಎನ್ನುವ ಮನಸ್ಥಿತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಇದೆ ಎಂದು ಕುಮಾರಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

# ಗಮನ ಸೆಳೆದ 'ಭೂ ಕೈಲಾಸ' ಗಮಕ





**ಕೊಮಾರನಹಳ್ಳಿ**

ಮಲೇಬೆನ್ನೂರು, ಅ. 11- ಕೊಮಾರನಹಳ್ಳಿಯ ಹೆಳವನ ಕಟ್ಟೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನದದ ವತಿಯಿಂದ ಕಲ್ಯಾಣ ಮಂಟಪದಲ್ಲಿ ಈಚೆಗೆ ಹಮ್ಮಿಕೊಂಡಿದ್ದ 'ಭೂ ಕೈಲಾಸ' ಗಮಕ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು. ವಿದುಷಿ ಹಾಸನದ ಶ್ರೀಮತಿ ರಾಧಾಕೃಷ್ಣ ಸ್ವರೂಪ ಅವರು ಈ ಹಿಂದೆ ಮಲೇಬೆನ್ನೂರಿನಲ್ಲಿ ಸುನಾದ ಸಂಗೀತ ಶಾಲೆ ನಡೆಸುತ್ತಿದ್ದು, ಸೊಗಸಾಗಿ ಗಮಕ ವಾಚನ ಮಾಡಿದರೆ, ವಿದುಷಿ ತಿಪಟೂರಿನ ಶ್ರೀಮತಿ ಸೌಮ್ಯಶ್ರೀ ಶ್ರೀಕಂಠ ಅವರು ಬಹಳ ಚೆನ್ನಾಗಿ ಗಮಕ ವ್ಯಾಖ್ಯಾನ ಮಾಡುವ ಮೂಲಕ 2 ತಾಸು ಸಭಿಕರನ್ನು ಹಿಡಿದಿಟ್ಟುಕೊಂಡಿದ್ದರು. ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಗ್ರಾಮದ ಜಿ. ಮಂಜುನಾಥ್ ಪಟೇಲ್, ಐರಣಿ ಅಣ್ಣಪ್ಪ, ಮಡಿವಾಳರ ಬಸವರಾಜ್, ನೇತ್ರಾವತಿ, ನಹುಮಂತಪ್ಪ, ದಾನಪ್ಪ ಹನುಮಂತಪ್ಪ, ಆಧ್ಯಾತ್ಮ ಚಿಂತಕ ಎಂ.ಸಿ. ನಟರಾಜ್, ದೇವಸ್ಥಾನದ ಅಚಕ ಗುರುರಾಜ ಚಾರ್, ಮಲೇಬೆನ್ನೂರಿನ ಬಿ. ವೀರಯ್ಯ, ಕೆ.ಜಿ. ರಂಗನಾಥ್, ಶಿಕ್ಷಕ ದಿವಾಕರ್, ಪವನ್‌ಕುಮಾರ್, ದಿಬ್ದಹಳ್ಳಿ ನಾಗರಾಜ್ ಮತ್ತಿತರರಿದ್ದರು.

# ಕ್ರೇನ್ ಹರಿದು ಯುವಕ ಸಾವು

**(1ನೇ ಪುಟದಿಂದ)** ಮಾಡುತ್ತಿದ್ದ. ಈತ ಕಳೆದ 3 ದಿನಗಳಿಂದಲೂ ಬಂಟಿಂಗ್ಸ್ ಕಟ್ಟಲು ಹೋಗುತ್ತಿದ್ದ ಎನ್ನಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ. ಆಸ್ಪತ್ರೆಯ ಮುಂಭಾಗ ಮೃತನ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಇದೇ ಅ. 14ರಂದು ನಗರದ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯ ಹಿನ್ನೆಲೆಯಲ್ಲಿ ಪಿಬಿ ರಸ್ತೆಯುದ್ದಕ್ಕೂ ಕ್ರೇನ್ ಬಳಸಿಕೊಂಡು ಕೇಸರಿ ಬಾವುಟ ಕಟ್ಟಲಾಗುತಿತ್ತು.

# ವಾಲ್ಮೀಕಿ ಜಯಂತಿ : ನಗರದಲ್ಲಿ ಇಂದು ಸಭೆ

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಸಭಾಂಗಣ. ಮೊದಲನೆ ಮಹಡಿ, ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬೇಬಿ ಸುನೀತಾ ತಿಳಿಸಿದ್ದಾರೆ.

# ರಾಣೇಬೆನ್ನೂರು 'ವಂದೇ ಮಾತರಂ' ಸಂಘಟನೆಯಿಂದ ಅತಿ ಹೆಚ್ಚು ರಕ್ತದಾನ



ರಾಣೇಬೆನ್ನೂರು, ಅ.11- 'ರಾಣೇಬೆನ್ನೂರು ಕಾ ರಾಜಾ' ಗಣೇಶ ಪ್ರತಿಷ್ಠಾಪಿಸಿರುವ ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆ ಹಾಗೂ ಜಿಲ್ಲಾ ರಕ್ತ ಕೇಂದ್ರ ಹಾಗೂ ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯ ರಕ್ತ ಕೇಂದ್ರದವರು ಸಂಯುಕ್ತವಾಗಿ ನಡೆಸಿದ ರಕ್ತದಾನ ಶಿಬಿರದಲ್ಲಿ ಸಂಘಟನೆಯ ಅಧ್ಯಕ್ಷ ಪ್ರಕಾಶ ಬುರಡಿಕಟ್ಟಿ, ವೀರೇಶ ಹೆದ್ದೇರಿ, ಪ್ರಮೋದ ಸೇರಿದಂತೆ ನೂರಾರು ಯುವಕರು ರಕ್ತದಾನ ಮಾಡಿದರು. ಹಾವೇರಿ ಜಿಲ್ಲೆಯಾದ್ಯಂತ ನಡೆಯುವ ಎಲ್ಲ ಶಿಬಿರಗಳಲ್ಲಿ ಸಂಗ್ರಹವಾಗುವುದಕ್ಕಿಂತ ಹೆಚ್ಚು ಅಂದರೆ 168 ಯೂನಿಟ್ ರಕ್ತವನ್ನು ಕಳೆದ ವರ್ಷದ ಶಿಬಿರದಲ್ಲಿ ಸಂಗ್ರಹಿಸಿ ದಾನ ಮಾಡಲಾಗಿತ್ತು. ಈಗ ಅದಕ್ಕಿಂತಲೂ ಹೆಚ್ಚು ಅಂದರೆ 240 ಯೂನಿಟ್ ಕೊಡಲಾಯಿತು. ಇದರ ಸದುಪಯೋಗ ಬಡವರಿಗೆ ಆಗಲಿದ್ದು, ವಂದೇಮಾತರಂ ಸಂಸ್ಥೆಯ ಈ ಸಮಾಜಮುಖಿ ಕಾರ್ಯ ಶ್ಲಾಘನೀಯವಾಗಿದೆ.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಡಾ. ಬಸವರಾಜ ತಳವಾರ, ಬಸವರಾಜ ಕಮತರ, ಹರೀಶ ಸಣ್ಣಬೊಮ್ಮಜಿ, ಸುಮಾ ಲಮಾಣಿ, ಶ್ರೀ ನಿವಾಸ ಸುರಹೊನ್ನೆ, ಅಕ್ಕಮ್ಮ ಅಮಾಸಿ, ದಾವಣಗೆರೆಯ ಶಿಲ್ಪಾ, ರಶ್ಮಿ, ಡಿ.ಎಸ್. ದೇವೇಂದ್ರಪ್ಪ ಮತ್ತು ಹಾವೇರಿ ರಕ್ತ ಕೇಂದ್ರದ ಸಿಬ್ಬಂದಿ ರಕ್ತ ಸಂಗ್ರಹಿಸಿಕೊಂಡರು.

# 20 ಸಾವಿರ ಶಿಕ್ಷಕರ ನೇಮಕ

**(1ನೇ ಪುಟದಿಂದ)** ಇದೆ. 3500 ಜತೆಗೆ 20 ಸಾವಿರ ಶಿಕ್ಷಕರ ನೇಮಕದಿಂದ ಬೋಧಕರ ಕೊರತೆಯೂ ನಿವಾರಣೆ ಆಗಲಿದೆ ಎಂದವರು ತಿಳಿಸಿದರು.

ಸಿ.ಎಸ್.ಆರ್ ನಿಧಿಯಡಿ ಈ ವರ್ಷ ಲಭ್ಯ ಆಗಲಿರುವ 2500 ಕೋಟಿ ರೂಪಾಯಿಗಳನ್ನು ರಾಜ್ಯದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸುವ ಕುರಿತು ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಆಸಕ್ತಿ ತೋರಿದ್ದಾರೆ ಎಂದು ಸಚಿವರು ತಿಳಿಸಿದರು.

# ಹೊಸಬರು ಬರಬಾರದೆಂಬ ನಿಯಮವಿದೆಯೇ?

**(1ನೇ ಪುಟದಿಂದ)** ನಾನು ಬೆಂಬಲಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

**ಒಂದಿಬ್ಬರಷ್ಟೇ ನಾಯಕರಲ್ಲ:** ಜಿಲ್ಲೆಯಲ್ಲಿ ಒಂದಿಬ್ಬರು ಮಾತ್ರ ನಾಯಕರಲ್ಲ. ನಾಯಕರೆಂದರೆ ಕೇವಲ ಸಚಿವರು, ಶಾಸಕರಷ್ಟೇ ಅಲ್ಲ. ಸಮಾಜದಲ್ಲಿ ರಾಜಕಾರಣಿಗಳೂ ಇರುತ್ತಾರೆ. ಸಮಾಜದ ನಾಯಕರೂ ಇರುತ್ತಾರೆ ಎಂದು ವಿನಯ್ ಕುಮಾರ್ ಸ್ಥಳೀಯ ನಾಯಕರುಗಳಿಗೆ ತಿರುಗೇಟು ನೀಡಿದರು.

**ವಾರದೊಳಗೆ ಮಲ್ಲಿಕಾರ್ಜುನ್, ಶಿವಶಂಕರಪ್ಪ ಭೇಟಿ:** ಕಳೆದ 2 ತಿಂಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರು, ಶಾಸಕರ ಸಭೆ ಕರೆದಿದ್ದರು.

ಅಲ್ಲಿ ನನ್ನ ಹೆಸರು ಪ್ರಸ್ತಾಪವಾಗಿತ್ತು. ದಾವಣಗೆರೆ ಕ್ಷೇತ್ರದಲ್ಲಿ ಸಂಚರಿಸುವಂತೆ ಮುಖ್ಯಮಂತ್ರಿಗಳೇ ಸೂಚಿಸಿದ್ದರು. ಎಲ್ಲಾ ನಾಯಕರನ್ನೂ ಭೇಟಿ ಮಾಡುವಂತೆ ಹೇಳಿದ್ದರು. ಅದರಂತೆ ಎಲ್ಲಾ ನಾಯಕರನ್ನೂ ಈಗಾಗಲೇ ಭೇಟಿ ಮಾಡಿ ಬೆಂಬಲ ಕೋರಿದ್ದೇನೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಮನೂರು ಶಿವಶಂಕರಪ್ಪ ಅವರನ್ನು ಇನ್ನೊಂದು ವಾರದಲ್ಲಿ ಭೇಟಿ ಮಾಡಿ ಅವರ ಬೆಂಬಲವನ್ನೂ ಕೋರಲಿದ್ದೇನೆ ಎಂದು ಹೇಳಿದರು.

**ಕೆಲಸ ಮಾಡಿ ಬಾ ಎಂದಿದ್ದರು ಎಸ್ಸೆಸ್ಸೆಂ:** ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಲು ಅವರಿಗೆ ಕರೆ ಮಾಡಿದ್ದೆ. ನೀನಿನ್ನೂ ಹೊಸಬ, ಕ್ಷೇತ್ರದಲ್ಲಿ ಕೆಲಸ ಮಾಡಿ ಬಾ ಎಂದು ಅವರು ಹೇಳಿದ್ದರು. ಅದರಂತೆ ಮೂರು ತಿಂಗಳು ಕ್ಷೇತ್ರ ಸಂಚರಿಸಿ, ಕೆಲಸ ಮಾಡಿದ್ದೇನೆ. ಅವರ ವಿಶ್ವಾಸ ಗಳಿಸದೇ ಮುಂದುವರೆಯುವುದು ಕಷ್ಟ ಎಂದು ಗೊತ್ತಿದೆ. ವಾರದೊಳಗೆ ಭೇಟಿ ಮಾಡುತ್ತೇನೆ ಎಂದರು.

**ಮಂಜಪ್ಪಗೆ ಅಭದ್ರತೆ:** ಕಾಂಗ್ರೆಸ್ ಜಿಲ್ಲಾಧ್ಯಕ್ಷ, ಹೆಚ್.ಬಿ. ಮಂಜಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ವಿನಯ್ ಕುಮಾರ್, ಮಂಜಪ್ಪ ಅವರಿಗೆ ಅಭದ್ರತೆ ಕಾಡುತ್ತಿರಬಹುದು. ಹಾಗಾಗಿ ಈ ರೀತಿ ಮಾತನಾಡಿರಬಹುದು. ಮಂಜಪ್ಪ ಅವರಿಗೆ ನಾನು ಕರೆ ಮಾಡಿದ್ದೇನೆ. ಇತ್ತೀಚೆಗೆ ಭೇಟಿಯನ್ನು ಮಾಡಿದ್ದೇನೆ. ಕಳೆದ ಮೂರು ತಿಂಗಳನಿಂದಲೂ ಬೆಂಬಲ ಕೇಳುತ್ತಿದ್ದೇನೆ ಎಂದರು.

**ಚನ್ನಗಿರಿ ಶಾಸಕರು ಬೆಂಬಲಿಸಿದ್ದಾರೆ:** ವಿನಯ್ ಕುಮಾರ್ ಅಂತವರು ಪಕ್ಷಕ್ಕೆ ಬರಬೇಕು. ಅವರು ಪಕ್ಷದ ಆಸ್ತಿ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ ಎಂದರು.

**ಬೆಂಬಲಿಸದಿದ್ದರೆ ಪಕ್ಷ ದ್ರೋಹ:** ಪ್ರಜಾಪ್ರಭುತ್ವದಲ್ಲಿ ಸಂಘಟನೆ ಮಾಡಲು ಪ್ರತಿಯೊಬ್ಬರಿಗೂ ಹಕ್ಕಿದೆ. ಅದನ್ನು ಪಕ್ಷದ ಲಾಭಕ್ಕಾಗಿ ಮಾಡುತ್ತಿದ್ದೇನೆ. ಜನರೇ ನಾನು ಪ್ರಬಲ ಆಕಾಂಕ್ಷಿ ಎಂದು ಹೇಳುತ್ತಿದ್ದಾರೆ. ನನಗೆ ಟಿಕೆಟ್ ಕೊಟ್ಟರೂ ಪಕ್ಷದಲ್ಲಿದ್ದವರು ಬೆಂಬಲ ನೀಡದಿದ್ದರೆ ಅದು ಪಕ್ಷಕ್ಕೆ ದ್ರೋಹ ಬಗೆದಂತಾಗುತ್ತದೆ. ಆ ರೀತಿ ಯಾರೂ ಮಾಡುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

# ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಉಚಿತ ರಕ್ತದ ಗುಂಪಿನ ತಪಾಸಣಾ ಶಿಬಿರ



**ಭರಮಸಾಗರ**

ದಾವಣಗೆರೆ, ಅ. 11- ಭಾರತೀಯ ರೆಡ್ ಕ್ರಾಸ್ ಸಂಸ್ಥೆ (ದಾವಣಗೆರೆ) ಸಹಯೋಗದಲ್ಲಿ ಭರಮಸಾಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಉಚಿತ ರಕ್ತದ ಗುಂಪಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಶಶಿಕಲಾ ಎಸ್., ಕಾಲೇಜಿನ ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳಾದ ಪ್ರೊ.ಲೋಕೇಶ್ ನಾಯ್ಕ್ ಮತ್ತು ಪ್ರೊ. ಚಂದ್ರಕುಮಾರ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಡಾ. ಬಿ.ವಿ. ಧನಂಜಯಮೂರ್ತಿ, ಸಂಯೋಜಕರಾದ ಎನ್.ಜಿ. ಶಿವಕುಮಾರ, ಕಾಲೇಜಿನ ಯುವ ರೆಡ್ ಕ್ರಾಸ್ ಘಟಕದ ಸಂಚಾಲಕರಾದ ಪ್ರೊ. ಕೆ.ಎಸ್. ಸೌಮ್ಯ ಹಾಗೂ ಸಿಬ್ಬಂದಿಗಳಾದ ಜ್ಯೋತಿ, ಗಿರೀಶ್, ಪದ್ಮಾ ಉಪಸ್ಥಿತರಿದ್ದರು.

# ಮಲೇಬೆನ್ನೂರಿನಲ್ಲಿ ಜಾಗೃತಾ ಮೇಳ



ಮಲೇಬೆನ್ನೂರು, ಅ.11- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ರೈತರಿಗೆ, ಗ್ರಾಹಕರಿಗೆ ನಬಾರ್ಡ್ ಹಾಗೂ ಡಿಸಿಸಿ ಬ್ಯಾಂಕ್ ವತಿಯಿಂದ ಆರ್ಥಿಕ ಸಾಕ್ಷರತಾ ಕಾರ್ಯಕ್ರಮದಡಿಯಲ್ಲಿ ಡಿಜಿಟಲ್ ವ್ಯವಹಾರದ ಬಗ್ಗೆ ಜಾಗೃತಾ ಮೇಳವನ್ನು ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಡಿಸಿಸಿ ಬ್ಯಾಂಕಿನ ಮೇಲ್ವಿಚಾರಕ ಲೋಕೇಶ್ ನಾಯ್ಕ ಮಾತನಾಡಿದರು. ಸಂಘದ ಅಧ್ಯಕ್ಷರಾದ ಶ್ರೀಮತಿ ರೇವಮ್ಮ ಐರಣಿ ಪುಟ್ಟಪ್ಪ, ನಿರ್ದೇಶಕರಾದ ಜಿ.ಮಂಜುನಾಥ್ ಪಟೇಲ್, ಪಿ.ಆರ್.ಕುಮಾರ್, ಯುನೂಸ್, ಕೆ.ಜಿ. ಪರಮೇಶ್ವರಪ್ಪ ಮತ್ತು ಎಸ್.ಎಂ.ಮಂಜುನಾಥ್, ವೈ.ನಾಗೇಶಪ್ಪ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು. ಸಂಘದ ಸಿಇಓ ಸಿದ್ದಪ್ಪ ಸ್ವಾಗತಿಸಿದರು. ಪಿಗ್ಮಿ ಏಜೆಂಟ್ ಪ್ರಕಾಶ್ ವಂದಿಸಿದರು.

---

## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



**ದಿ॥ ಕೆ.ಜಿ.ಬಸವರಾಜಪ್ಪನವರು**

ಜನನ : 1.6.1956 ಮರಣ : 12.10.2014

ನೇರ ನುಡಿ, ದಿಟ್ಟ ಹೆಜ್ಜೆ ಮತ್ತೆ-ಮತ್ತೆ ಮಾರ್ಧನಿಸಿದಂತೆ, ಸ್ನೇಹ ಜೀವಿಯ ಸರಳತೆ ಮತ್ತೆ ಮತ್ತೆ ಕಾಡಿದಂತೆ ನಮ್ಮ ಜೀವನದಲ್ಲಿ ನಿಮ್ಮದೇ ಆದರ್ಶ ಕನಸುಗಳ ಸ್ಪರ್ಶ ಉರುಳೇ ಹೋಯಿತು ನೀವಿರದ ಈ ಒಂಭತ್ತು ವರುಷ.

ನಿಮ್ಮ ನೆನಪಿನಲ್ಲಿ ....

ಶ್ರೀಮತಿ ಕೆ.ಜಿ. ಮಂಜುಳ
ಶ್ರೀಮತಿ ಶೃತಿ ಹಾಗೂ ಡಾ॥ ಶಿವಶಂಕರಪ್ಪ ಎ.
ಚಿ॥ ಶೋಭಿತ್ ಎಸ್. ಅಗ್ರಹಾರ ಮತ್ತು ಚಿ॥ ಶ್ರೀಜಿತ್ ಎಸ್. ಅಗ್ರಹಾರ
ಹಾಗೂ ಬಂಧು-ಮಿತ್ರರು.

**ಬನಶ್ರೀ ಆರ್ಥೋ & ಟ್ರಾಮಾ ಕೇರ್**
# 282/3, 4ನೇ ಮೇನ್, 9ನೇ ಕ್ರಾಸ್, ಸುಚೇತನ ಆಸ್ಪತ್ರೆ ಪಕ್ಕ, ವಿಶ್ವೇಶ್ವರಯ್ಯ ಪಾರ್ಕ್ ಪೂರ್ವ ಮೇನ್ ಗೇಟ್ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ-2. ಮೊ. : 94806 04676

## ಮತ್ತೆ ಹುಟ್ಟಿ ಬಾ ಗೆಳೆಯಾ...

## ಭಾವಪೂರ್ಣ ಶ್ರದ್ಧಾಂಜಲಿ



ನೀ ಮರೆಯಾದರೂ ಕಳೆದ ಕ್ಷಣಗಳು ಮರಳಿ ಬರಲಾರವು...
ನೆರಳಿನಂತೆ ಒತ್ತೊತ್ತಿ ಕಣ್ಣೀರಿನ ಜೊತೆ ಬರುತ್ತಿದೆ ನಿನ್ನ ನೆನಪು...
ಜೀವನದಲ್ಲಿ ಪೂರ್ತಿ ನಗಲಾಗದು ನೀನಿಲ್ಲದೆ ಗೆಳೆಯ...
ಮರಳಿ ಬರಲಾರೆಯಾ...?

ದಿನಾಂಕ 11.10.2023ರ ಬುಧವಾರ ಸಂಜೆ ಆಕಸ್ಮಿಕವಾಗಿ ನಿಧನರಾದ ನಮ್ಮೆಲ್ಲರ ಆತ್ಮೀಯ ಸ್ನೇಹಿತ

**ಪೃಥ್ವಿರಾಜ್**

ನಿಧನಕ್ಕೆ ಭಾವ ಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲು ಎಂದು ಪ್ರಾರ್ಥಿಸುತ್ತೇವೆ.

**ಶ್ರೀ ವಿನಾಯಕ ಯುವಕರ ಸಂಘ**
**ಬಸವರಾಜ ಪೇಟೆ, 2ನೇ ಕ್ರಾಸ್, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11-10-2023ರಂದು ಅಕಾಲಿಕವಾಗಿ ನಿಧನರಾದ

**ಶ್ರೀ ಪೃಥ್ವಿರಾಜ್ ವಿ.**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ **ರಾಜು,** ಹುಲಿಗಿ ಎಂಟರ್‌ಪ್ರೈಸಸ್, ದಾವಣಗೆರೆ
- ✦ **ಅಣ್ಣಪ್ಪ** ಪ್ಲಂಬರ್ ✦ **ಅಗ್ನಿ ವೀರಣ್ಣ** ಪ್ಲಂಬರ್
- ✦ **ಪ್ರಕಾಶ್ ಬೂದಾಳ್** ಪ್ಲಂಬರ್ ✦ **ಸಾರಥಿ ಕೃಷ್ಣ** ಪ್ಲಂಬರ್

## ಸುದೀರ್ ಪಿ.ಜೆ. ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, 8ನೇ ಮೇನ್, 5ನೇ ಕ್ರಾಸ್ ವಾಸಿ, ಸುದೀರ್ ಪಿ.ಜೆ. (54) ಇವರು ದಿನಾಂಕ 11.10.2023ರ ಬುಧವಾರ ಬೆಳಿಗ್ಗೆ 4.30ಕ್ಕೆ ನಿಧನರಾದರು. ತಾಯಿ, ಸಹೋದರ, ಸಹೋದರಿ, ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.10.2023ರ ಬುಧವಾರ ಮಧ್ಯಾಹ್ನ 3.30ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿತು.

## ಪೃಥ್ವಿರಾಜ್ ನಿಧನ



ದಾವಣಗೆರೆ ಸಿಟಿ ಬಸವರಾಜ ಪೇಟೆ ವಾಸಿ ರಕ್ಕಸಕಿ ವೀರಣ್ಣ ಇವರ ಪುತ್ರ ಪೃಥ್ವಿರಾಜ್ (26) ಇವರು ದಿನಾಂಕ 11.10.2023ರ ಬುಧವಾರ ಸಂಜೆ 6.35ಕ್ಕೆ ನಿಧನರಾದರು. ತಂದೆ, ತಾಯಿ, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.10.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ಹಿಂದೂ ರು ದ್ರ ಭೂ ಮಿ ಯ ಲ್ಲಿ ನೆರವೇರಿಸಲಾಗುವುದು.

## ರಾಮಘಟ್ಟದ ಎಸ್.ರೇವಣಪ್ಪ ನಿಧನ



ದಾವಣಗೆರೆ ಸಿಟಿ ವಿದ್ಯಾನಗರ ವಾಸಿ ನಿವೃತ್ತ ಅಭಿಯಂತರರಾದ

**ರಾಮಘಟ್ಟದ ಎಸ್. ರೇವಣಪ್ಪನವರು**

ದಿನಾಂಕ : 11.10.2023ರ ಬುಧವಾರ ಮಧ್ಯಾಹ್ನ 3.00 ಗಂಟೆಗೆ ಹೊಳಲ್ಕೆರೆ ತಾಲ್ಲೂಕು ರಾಮಘಟ್ಟದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.10.2023ರ ಗುರುವಾರ ಮಧ್ಯಾಹ್ನ 12.30ಕ್ಕೆ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ರಾಮಘಟ್ಟ ಗ್ರಾಮದಲ್ಲಿರುವ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

ಧರ್ಮಪತ್ನಿ : **ಶ್ರೀಮತಿ ಅನ್ನಪೂರ್ಣಮ್ಮ, ಮಕ್ಕಳು-ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ರಾಮಘಟ್ಟದ ಸಮಸ್ತ ನಾಗರಿಕರು. ಫೋ. : 9511942454, 9886218102**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11.10.2023ರ ಬುಧವಾರ ಸಂಜೆ ಆಕಸ್ಮಿಕವಾಗಿ ನಿಧನರಾದ ನಮ್ಮೆಲ್ಲರ ಆತ್ಮೀಯ ಸ್ನೇಹಿತ

**ಪೃಥ್ವಿರಾಜ್**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲು ಎಂದು ಪ್ರಾರ್ಥಿಸುತ್ತೇವೆ.

**ಸ್ನೇಹ ಜೀವಿ ಗೆಳೆಯರ ಬಳಗ ಹಾಗೂ ಶ್ರೀದಂಡಿ ದುರುಗಮ್ಮ ಮರಿಯಮ್ಮ ದೇವಸ್ಥಾನ ಕಮಿಟಿ (ರಿ), ಬಸವರಾಜ ಪೇಟೆ, ದಾವಣಗೆರೆ**

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಭ್ರಷ್ಟಾಚಾರದ ತನಿಖೆ ನಡೆಸುತ್ತಿದ್ದ ಅಧಿಕಾರಿಗಳ ವರ್ಗಾವಣೆ : ಕಾಂಗ್ರೆಸ್**
ನವದೆಹಲಿ : ವಿವಿಧ ಯೋಜನೆಗಳಲ್ಲಿನ ಭ್ರಷ್ಟಾಚಾರ ಬಯಲಿಗೆ ಎಳೆದ ಮಹಾಲೇಖಪಾಲ ಕಚೇರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಈ ಅಧಿಕಾರಿಗಳ ವರ್ಗಾವಣೆಯನ್ನು ವಾಪಸ್ ಪಡೆಯಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.
ದ್ವಾರಕಾ ಎಕ್ಸ್‌ಪ್ರೆಸ್‌ವೇ, ಆಯುಷ್ಮಾನ್ ಭಾರತ್ ಯೋಜನೆಗಳ ಭ್ರಷ್ಟಾಚಾರದ ತನಿಖೆ ನಡೆಸುತ್ತಿದ್ದ ಅಧಿಕಾರಿಗಳ ಮೇಲೆ ಒತ್ತಡ ಹೇರಲು ವರ್ಗಾವಣೆ ಮಾಡಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

**ವೈದ್ಯಕೀಯ, ಕಾನೂನುಗಳು ಉನ್ನತ ಶಿಕ್ಷಣ ಆಯೋಗದ ವ್ಯಾಪ್ತಿಯಿಂದ ಹೊರಕ್ಕೆ**
ನವದೆಹಲಿ : ಎಲ್ಲ ಉನ್ನತ ಶಿಕ್ಷಣದ ನಿಯಂತ್ರಣಕ್ಕಾಗಿ ಆಯೋಗವೊಂದನ್ನು ರಚಿಸುವ ಮಸೂದೆಯನ್ನು ಶೀಘ್ರದಲ್ಲೇ ಸಂಸತ್ತಿನಲ್ಲಿ ಮಂಡಿಸಲಾಗುವುದು. ಆದರೆ, ವೈದ್ಯಕೀಯ ಹಾಗೂ ಕಾನೂನು ಕಾಲೇಜುಗಳು ಇದರ ವ್ಯಾಪ್ತಿಗೆ ಬರುವುದಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

**ದೇಶದ ಆರ್ಥಿಕತೆಗೆ ಜಾಗತಿಕ ಮಾನ್ಯತೆ : ಬಿಜೆಪಿ**
ನವದೆಹಲಿ : ಅಂತರರಾಷ್ಟ್ರೀಯ ಹಣಕಾಸು ನಿಧಿಯು ಭಾರತದ ಬೆಳವಣಿಗೆ ಅಂದಾಜನ್ನು ಶೇ.0.2ರಿಂದ ಹೆಚ್ಚಿಸಿ ಶೇ.6.3ಕ್ಕೆ ನಿಗದಿ ಪಡಿಸಿದೆ. ಭಾರತದ ಆರ್ಥಿಕತೆಯ ಬಲ ಹಾಗೂ ವೇಗವಾಗಿ ಬೆಳೆಯುವುದನ್ನು ಜಾಗತಿಕವಾಗಿ ಗುರುತಿಸಲಾಗುತ್ತಿದೆ ಎಂಬುದನ್ನು ಇದು ತೋರಿಸುತ್ತಿದೆ ಎಂದು ಬಿಜೆಪಿ ಹೇಳಿದೆ.

**ಪಿ.ಎಫ್.ಐ. ವಿರುದ್ಧ ಆರು ರಾಜ್ಯಗಳಲ್ಲಿ ಎನ್.ಐ.ಎ. ದಾಳಿ**
ನವದೆಹಲಿ : ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯಾದ ಎನ್.ಐ.ಎ. ಆರು ರಾಜ್ಯಗಳಲ್ಲಿ ದಾಳಿ ನಡೆಸಿದೆ.
ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಳೆದ ವರ್ಷ ಬಿಹಾರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಕ್ಷುಬ್ಧತೆ ಸೃಷ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಉಗ್ರ ಲಖಬೀರ್ ಸಿಂಗ್ ಆಸ್ತಿ ವಶಕ್ಕೆ ಆದೇಶ**
ನವದೆಹಲಿ : ನಿಯೋಜಿತ ಉಗ್ರ ಹಾಗೂ ಪಾಕಿಸ್ತಾನದ ಖಲಿಸ್ತಾನ ಲಿಬರೇಷನ್ ಫ್ರಂಟ್ ಸಂಘಟನೆಯ ಸ್ವಘೋಷಿತ ನಾಯಕ ಲಖಬೀರ್ ಸಿಂಗ್‌ಗೆ ಸೇರಿದ ಆಸ್ತಿ ವಶಕ್ಕೆ ಮೊಹಾಲಿಯ ಎನ್.ಐ.ಎ. ನ್ಯಾಯಾಲಯ ಆದೇಶಿಸಿದೆ. ಪಂಜಾಬ್‌ನ ಮೊಗ ಜಿಲ್ಲೆಯಲ್ಲಿನ ಆಸ್ತಿ ವಶಕ್ಕೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಮಣಿಪುರದಲ್ಲಿ ಮೊಬೈಲ್ ಇಂಟರ್‌ನೆಟ್ ನಿರ್ಬಂಧ ಮುಂದುವರಿಕೆ**
ಇಂಫಾಲ್ : ಮಣಿಪುರದಲ್ಲಿ ಮೊಬೈಲ್ ಇಂಟರ್‌ನೆಟ್ ಸೇವೆಗಳ ನಿರ್ಬಂಧವನ್ನು ಅಕ್ಟೋಬರ್ 16ರವರೆಗೆ ವಿಸ್ತರಿಸಿ ಮಣಿಪುರ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಸಂಘರ್ಷ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮೊಬೈಲ್ ಇಂಟರ್‌ನೆಟ್ ಮೇಲೆ ನಿಷೇಧ ಹೇರಲಾಗಿತ್ತು.

**ಅತ್ಯಾಚಾರ ಪ್ರಕರಣ : ಬಿಜೆಪಿ ನಾಯಕ ಹುಸೇನ್‌ಗೆ ಸಮನ್ಸ್**
ನವದೆಹಲಿ : ಬಿಜೆಪಿ ನಾಯಕ ಸೈಯದ್ ಷಾನವಾಜ್ ಹುಸೇನ್ ಅತ್ಯಾಚಾರ ಎಸಗಿರುವುದಾಗಿ ಹಾಗೂ ಬೆದರಿಕೆ ಹಾಕಿರುವುದಾಗಿ ಮಹಿಳೆಯೊಬ್ಬರು ದೆಹಲಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ.
ಈ ಹಿನ್ನೆಲೆಯಲ್ಲಿ ಬಿಜೆಪಿ ನಾಯಕ ಹುಸೇನ್‌ಗೆ ನ್ಯಾಯಾಲಯ ಸಮನ್ಸ್ ಕಳಿಸಿದೆ.

**ಅಮೆರಿಕದಲ್ಲಿ ವಿಶ್ವದ ಎರಡನೇ ಅತಿ ದೊಡ್ಡ ದೇವಾಲಯ ಉದ್ಘಾಟನೆ**
ರಾಬಿನ್ಸ್‌ವಿಲ್ಲೆ : ವಿಶ್ವದ ಎರಡನೇ ಅತಿ ದೊಡ್ಡ ದೇವಾಲಯ ಎಂದು ಹೇಳಲಾಗುವ ಅಕ್ಷರಧಾಮ ದೇವಾಲಯವನ್ನು ಅಮೆರಿಕದ ನ್ಯೂಜೆರ್ಸಿಯಲ್ಲಿ ಉದ್ಘಾಟಿಸಲಾಗಿದೆ. ಇದು ಪಶ್ಚಿಮ ಗೋಳದ ಅತೀ ದೊಡ್ಡ ದೇವಾಲಯ ಎಂದೂ ಹೇಳಲಾಗಿದೆ.

# ರಾಷ್ಟ್ರೀಯ ಹಬ್ಬಗಳಿಗೆ ಗೈರು : ಅಧಿಕಾರಿಗಳಿಗೆ ನೋಟಿಸ್

## ಹರಪನಹಳ್ಳಿ : ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ತಹಶೀಲ್ದಾರ್ ಗಿರೀಶ್‌ಬಾಬು

ಹರಪನಹಳ್ಳಿ, ಅ. 11- ರಾಷ್ಟ್ರೀಯ ಹಬ್ಬಗಳಿಗೆ ಗೈರು ಹಾಜರಾದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ನೀಡಲಾಗುವುದು ಎಂದು ತಹಶೀಲ್ದಾರ್ ಗಿರೀಶ್‌ಬಾಬು ಹೇಳಿದರು.



ಪಟ್ಟಣದ ಮಿನಿ ವಿಧಾನಸೌಧದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ದಿನಾಂಕ 28ರಂದು ಜರುಗುವ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಪಟ್ಟಣದ ಸಮರ್ಥ ಸೌಧದಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು. ಕಾರ್ಯಕ್ರಮಕ್ಕೆ ಸಂಘ-ಸಂಸ್ಥೆಯವರು ಹಾಗೂ ವಿವಿಧ ಸಮಾಜಗಳ ಮುಖಂಡರಿಗೆ ಆಹ್ವಾನ ನೀಡಿ ಎಂದು ಸೂಚನೆ ನೀಡಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಉಚ್ಚೆಂಗೆಪ್ಪ ಕೆ. ಮಾತನಾಡಿ, ಭಾರತೀಯ ಸಂಸ್ಕೃತಿಗೆ ಮಾನವೀಯ ಮೌಲ್ಯಗಳನ್ನು ಜಗತ್ತಿಗೇ ಸಾರಿದ ಆದಿಕವಿ, ದಾರ್ಶನಿಕ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲು ಅಧಿಕಾರಿಗಳು, ಸಂಘ-ಸಂಸ್ಥೆಯವರು ಹಾಗೂ ವಿವಿಧ ಸಮಾಜದ ಮುಖಂಡರ ಸಹಕಾರ ಅಗತ್ಯವಾಗಿದ್ದು, ವಾಲ್ಮೀಕಿ ಜಯಂತಿಯ ವೇದಿಕೆ ಕಾರ್ಯಕ್ರಮಕ್ಕೆ ವಿವಿಧ ಸಮಾಜಗಳ ಮುಖಂಡರುಗಳನ್ನು ಆಹ್ವಾನಿಸುವ ಮೂಲಕ ವಾಲ್ಮೀಕಿಯವರ ಆದರ್ಶಗಳನ್ನು ತಿಳಿ ಹೇಳುವ ಮೂಲಕ ವಿವಿಧತೆಯಲ್ಲಿ ಏಕತೆ ಕಾಣುವಂತಹ ಕಾರ್ಯಕ್ರಮ ಮಾಡಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಹೆಚ್.ಟಿ. ಗಿರೀಶಪ್ಪ ಹಾಗೂ ಸಮಾಜದ ಕಾರ್ಯದರ್ಶಿ ಗಿರಜ್ಜಿ ನಾಗರಾಜ್ ಮಾತನಾಡಿ, ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಗೈರು ಎದ್ದು ಕಾಣುತ್ತಿದ್ದು, ಮಹನೀಯರ ಜಯಂತಿಯನ್ನು ಯಶಸ್ವಿಗೊಳಿಸಲು ಅಧಿಕಾರಿಗಳು, ಸಮಾಜದ ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು ಹಾಗೂ ಗ್ರಾಮೀಣ ಪ್ರದೇಶದಿಂದ ಬರುವ ಸಮಾಜದ ಬಂಧುಗಳು ಜಾಸ್ತಿ ಇದ್ದು, ಈಗಿರುವ ಸಮಯದ ಬದಲು ಮಧ್ಯಾಹ್ನ 1 ಗಂಟೆಗೆ ಸಭೆ ಆಯೋಜಿಸಿದರೆ ಉತ್ತಮ ಎಂದರು.

ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಹಾಗೂ ಮಾದಿಗ ದಂಡೋರ ಸಮಿತಿಯ ಅಧ್ಯಕ್ಷ ಪುಣಬಗಟ್ಟಿ ನಿಂಗಪ್ಪ ಮಾತನಾಡಿ, ಶ್ರೀ ಮಹರ್ಷಿ ವಾಲ್ಮೀಕಿ ಒಂದು ಜಾತಿಗೆ ಸೀಮಿತವಾದವರಲ್ಲ. ಮಹನೀಯರ ಜಯಂತಿಗಳಿಗೆ ವಿವಿಧ ಸಮಾಜಗಳ ಮುಖಂಡರುಗಳನ್ನು ಸಭೆಗೆ ಆಹ್ವಾನಿಸಬೇಕು ಎಂದು ಸಲಹೆ ನೀಡಿದರು.

ಸಮಾಜ ಕಲ್ಯಾಣಾಧಿಕಾರಿ ರೇಣುಕಾದೇವಿ, ಪುರಸಭೆ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ, ತಾಲ್ಲೂಕು ವಾಲ್ಮೀಕಿ ನಾಯಕ ಮಹಿಳಾ ಘಟಕದ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ಏಕಲವ್ಯ ಸಂಘರ್ಷ ಸಮಿತಿಯ ಅಧ್ಯಕ್ಷ ರಾಯದುರ್ಗದ ಪ್ರಕಾಶ, ಕಾರ್ಯದರ್ಶಿ ಶಿವರಾಜ, ಮುಖಂಡರಾದ ಮಂಡಕ್ಕಿ ಸುರೇಶ, ಮಾರುತಿ ಪೂಜಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ವಿದ್ಯುತ್ ಪೂರೈಸಲು ಸರ್ಕಾರ ವಿಫಲ 16ಕ್ಕೆ ಬೆಸ್ಕಾಂ ಕಚೇರಿಗೆ ಬಿಜೆಪಿ ಮುತ್ತಿಗೆ

ದಾವಣಗೆರೆ, ಅ.11- ಸಮರ್ಪಕವಾಗಿ ವಿದ್ಯುತ್ ಪೂರೈಕೆಯಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರದ ವೈಫಲ್ಯ ಖಂಡಿಸಿ ಇದೇ ದಿನಾಂಕ 16ರ ಸೋಮವಾರ ಕೆಇಬಿ ವೃತ್ತದ ಬಳಿಯ ಬೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಹೇಳಿದ್ದಾರೆ.

> **ಗ್ಯಾರಂಟಿಗಳ ಭರಾಟೆಯಲ್ಲಿ ವಿದ್ಯುತ್ ಉತ್ಪಾದನೆ, ಬೇಡಿಕೆಯ ಬಗ್ಗೆ ಅರಿಯದೇ ಇಂದು ರೈತ ಕಣ್ಣೀರಿಡುವ ದುಃಸ್ಥಿತಿ**
>
> **- ಹನಗವಾಡಿ ವೀರೇಶ್,**
> ಜಿಲ್ಲಾ ಬಿಜೆಪಿ ಅಧ್ಯಕ್ಷರು

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಹರಿಹರ ಶಾಸಕ ಬಿ.ಪಿ. ಹರೀಶ್ ಸೇರಿದಂತೆ ಜಿಲ್ಲೆಯ ಮಾಜಿ ಶಾಸಕರು, ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಗ್ಯಾರಂಟಿಗಳ ಭರಾಟೆಯಲ್ಲಿ ವಿದ್ಯುತ್ ಉತ್ಪಾದನೆ, ಬೇಡಿಕೆಯ ಬಗ್ಗೆ ಅರಿಯದೇ, ಇಂದು ರೈತ ಕಣ್ಣೀರಿಡುವ ದುಃಸ್ಥಿತಿಯನ್ನು ಸರ್ಕಾರ ಅಕ್ಟೋಬರ್ ತಿಂಗಳಲ್ಲಿಯೇ ತಂದಿದೆ. ಮುಂದಿನ ದಿನಗಳಲ್ಲಿ ರೈತರಿಗೆ ಇನ್ನೂ ಆತಂಕದ ದಿನಗಳು ಎದುರಾಗಲಿವೆ ಎಂದರು.

ಅಮಾಯಕ ಮತದಾರರನ್ನು ವಂಚಿಸಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಗ್ಯಾರಂಟಿಗಾಗಿ ಹಲವಾರು ಮಾರ್ಗದಲ್ಲಿ ಹಣ ದೋಚುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಆರೋಪಿಸಿದರು. ಇದೇ 15ಕ್ಕೆ ಭದ್ರಾ ನಾಲೆ ನೀರು ಬಂದ್ ಮಾಡುವುದಾಗಿ ಕಾಡಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾತಿನಂತೆ ನೀರು ಹರಿಸಬೇಕು. ನೀರು ಸ್ಥಗಿತಗೊಳಿಸಿದ್ದೇ ಆದರೆ ಉಗ್ರ ಹೋರಾಟ ನಡೆಸಲಾಗುವುದು ಎಂದರು.

ರೈತ ಮುಖಂಡ ಕೋಳೇನಹಳ್ಳಿ ಸತೀಶ್ ಮಾತನಾಡಿ, ನಿನ್ನೆ ರೈತರು ಸಚಿವರನ್ನು ಭೇಟಿ ಮಾಡಿದಾಗ, ಮುಖ್ಯಮಂತ್ರಿ ಬಳಿ ನಿಯೋಗ ಹೋಗೋಣ ಎಂದು ಸಚಿವರು ಹೇಳಿದ್ದಾರೆ. ಐಸಿಸಿ ಸದಸ್ಯರೂ ಆಗಿರುವ ಸಚಿವರು ಮುಖ್ಯಮಂತ್ರಿ ಬಳಿ ಹೋಗೋಣ ಎಂದಿರುವುದು ರೈತರನ್ನು ಮೂರ್ಖರನ್ನಾಗಿಸುವ ತಂತ್ರ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಡಿ.ಎಸ್. ಶಿವಶಂಕರ್, ಮುಖಂಡರುಗಳಾದ ಕಡ್ಲೇಬಾಳು ಧನಂಜಯ್, ಲೋಕಿಕೆರೆ ನಾಗರಾಜ್, ಶ್ರೀನಿವಾಸ ದಾಸಕರಿಯಪ್ಪ, ಬಿ.ಎಸ್. ಜಗದೀಶ್, ಹೆಚ್.ಎನ್. ಶಿವಕುಮಾರ್, ಕೊಟ್ರೇಶ್ ಗೌಡ್ರು, ಕಡ್ಲೇಬಾಳು ಬಸಣ್ಣ, ಅತಿಥ್ ಅಂಬರ್‌ಕರ್ ಹಾಗು ಇತರರು ಉಪಸ್ಥಿತರಿದ್ದರು.

# ಎಸ್ಸೆಸ್ಸೆಂ ದಂಪತಿಗೆ ಪ್ರಸಾದ ಕಾಣಿಕೆ



ದಾವಣಗೆರೆ, ಅ. 11- ಹಿಂದೂ ಯುವ ಶಕ್ತಿ ಸಮಿತಿ ಎಂ.ಸಿ.ಸಿ ಎ ಬ್ಲಾಕ್ ಇವರ ವತಿಯಿಂದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಹಾಗೂ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಪ್ರಸಾದ ಹಾಗೂ ನೆನಪಿನ ಕಾಣಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಪಿ.ಸಿ. ರಾಮನಾಥ್, ಗುರುರಾಜ್, ಕೇಶವ್, ಶಿವಕುಮಾರ್, ದೀಪಕ್ ಮತ್ತು ರಜತ್ ಉಪಸ್ಥಿತರಿದ್ದರು.

# ದಸರಾಗೆ ಆಗಮಿಸಲು ಸಿದ್ದರಾಮಯ್ಯಗೆ ಆಹ್ವಾನ

ಬೆಂಗಳೂರು, ಅ.11- ವಿಶ್ವ ವಿಖ್ಯಾತ ಮೈಸೂರು ದಸರಾಕ್ಕೆ ಆಗಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರ ನೇತೃತ್ವದ ನಿಯೋಗವು ಆಹ್ವಾನ ನೀಡಿತು.

ನಿಯೋಗವು ಇಂದು ವಿಶ್ವ ವಿಖ್ಯಾತ ದಸರಾದ ಆಹ್ವಾನ ಪತ್ರಿಕೆಯನ್ನು ಮುಖ್ಯಮಂತ್ರಿಗೆ ಇಂದು ನೀಡಿತ್ತು. ಬಳಿಕ ಮಾತನಾಡಿದ ಮುಖ್ಯಮಂತ್ರಿ ದಸರಾ ನನ್ನೂರ ಹಬ್ಬ, ನಾನು ಬಾಲ್ಯದಲ್ಲಿ ಅಪ್ಪನ ಹೆಗಲು ಮೇಲೆ ಕೂತು ದಸರಾ ನೋಡುತ್ತಿದ್ದೆ. ಈಗ ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ದಸರಾದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತದ್ದು ನನ್ನ ಸೌಭಾಗ್ಯ ಎಂದರು.

# ಅರಣ್ಯ ಗಡಿ ಭಾಗದಲ್ಲಿ ವಾಣಿಜ್ಯ ಚಟುವಟಿಕೆಗೆ ಅನುಮತಿ

ಬೆಂಗಳೂರು, ಅ.11- ನಾಗರ ಹೊಳೆ ಸೇರಿದಂತೆ ರಾಜ್ಯದ ಪಶ್ಚಿಮ ಘಟ್ಟ ಅರಣ್ಯ ಗಡಿ ಭಾಗದಲ್ಲೇ ವಾಣಿಜ್ಯ ಚಟುವಟಿಕೆ ಹಾಗೂ ಮನೆಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಉಪಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದ್ದು, ಅರಣ್ಯ ಬದಿಯಲ್ಲಿರುವ ಖಾಸಗಿ ಭೂಮಾಲೀಕರು ಮನೆ ನಿರ್ಮಿಸಲು ಇನ್ನು ಮುಂದೆ ಯಾವುದೇ ಅಭ್ಯಂತರವಿಲ್ಲ.

ಅರಣ್ಯ ಮತ್ತು ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ರೆಸಾರ್ಟ್‌ಗಳ ನಿರ್ಮಾಣಕ್ಕೂ ಸಭೆ ಸಮ್ಮತಿಸಿರುವುದಲ್ಲದೆ, ವಿದ್ಯುತ್ ಉತ್ಪಾದನೆಗೆ ವಿಂಡ್‌ಮಿಲ್‌ಗಳನ್ನು ಪ್ರಾರಂಭಿಸಬಹುದು ಎಂದು ನಿರ್ಧರಿಸಲಾಗಿದೆ.

ದಟ್ಟ ಅರಣ್ಯ ಗಡಿ ಭಾಗದಲ್ಲೇ ಸಾಮಿಲ್ ತೆರೆಯಲು ಸಂಪುಟದ ಉಪ ಸಮಿತಿ ಅವಕಾಶ ಮಾಡಿಕೊಟ್ಟಿದೆ. ಅರಣ್ಯ ಗಡಿಯಿಂದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಇದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಲಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಅನುಮತಿ ಇರಲಿಲ್ಲ ಎಂದು ಹೇಳಿದರು.

ರಾಜ್ಯದಲ್ಲಿ ಸುಮಾರು ಮೂವತ್ತೈದು ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪೈಕಿ ಇಪ್ಪತ್ತೊಂಬತ್ತು ಪ್ರದೇಶಗಳಲ್ಲಿ ಇಂತಹ ಚಟುವಟಿಕೆಗಳಿಗೆ ಅನುಮತಿ ಕೊಡಲು ಸಹಮತ ವ್ಯಕ್ತವಾಗಿತ್ತು. ನಾಗರಹೊಳೆ ಸೇರಿದಂತೆ ಇನ್ನೂ ಆರು ಪ್ರದೇಶಗಳಲ್ಲಿ ಈ ನಿಯಮವನ್ನು ಸಡಿಲಿಸುವ ಕುರಿತು ಇಂದು ಸಹಮತ ವ್ಯಕ್ತವಾಗಿದೆ ಎಂದು ವಿವರಿಸಿದರು.

# ಎಂ.ಬಿ ಕಾಲೇಜಿನಲ್ಲಿ ಗಾಂಧಿ-ಶಾಸ್ತ್ರಿ ಜಯಂತಿ



ದಾವಣಗೆರೆ, ಅ. 11- ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಭಾರತ ದೇಶದ ಮಹಾನ್ ಚೇತನಗಳಾದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿರವರ ಜಯಂತಿಯನ್ನು ಆಚರಿಸಲಾಯಿತು.

ಪ್ರಾಚಾರ್ಯ ಡಾ. ಪ್ರಸಾದ್ ಬಂಗೇರ ಎಸ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ರಸಾಯನ ಶಾಸ್ತ್ರ ವಿಭಾಗದ ಉಪನ್ಯಾಸಕರಾದ ಕು.ಹರ್ಷಿತ ಕೆ ಇವರು ಕಾರ್ಯಕ್ರಮದ ಕುರಿತು ಮಾತನಾಡಿದರು.

ಮಹಾನ್ ವ್ಯಕ್ತಿಗಳ ಜೀವನ ಮತ್ತು ಆದರ್ಶಗಳನ್ನು ನಾವೆಲ್ಲರೂ ಪಾಲಿಸಿದಾಗಲೇ ಇಂತಹ ಆಚರಣೆಗಳು ಅರ್ಥಪೂರ್ಣ ಎಂದು ಕೆ. ಹರ್ಷಿತ ತಿಳಿಸಿದರು. ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ರಘುಪತಿ ರಾಘವ ರಾಜಾರಾಮ್ ಪ್ರಾರ್ಥನೆ ಗೀತೆಯನ್ನು ಹಾಡಿದರು. ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಪಿ. ಮಮತ ಕಾರ್ಯಕ್ರಮ ನಡೆಸಿಕೊಟ್ಟರು.

# ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು-ಕದಳಿ ಮಹಿಳಾ ವೇದಿಕೆಯಿಂದ ದತ್ತಿ ಉಪನ್ಯಾಸ



ದಾವಣಗೆರೆ, ಅ.11- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಗರದ ಎಂ.ಸಿ.ಕಾಲೋನಿಯಲ್ಲಿರುವ ಬಸವ ಮಂಟಪದಲ್ಲಿ ಜರುಗಿದ 147ನೇ ಕಮ್ಮಟದಲ್ಲಿ ದತ್ತಿ ಉಪನ್ಯಾಸ, ಗಾಂಧಿ ಜಯಂತಿ, ಚೆನ್ನಬಸವಣ್ಣ ಮತ್ತು ಕಲ್ಯಾಣ ಸ್ಮರಣೆ ಕಾರ್ಯ ಕ್ರಮ ಆಯೋಜಿಸಲಾಗಿತ್ತು.

ಲಿಂಗೈಕ್ಯ ಪ್ರೊ. ಬಿ.ಕೆ.ಸಿದ್ದಪ್ಪ, ಲಿಂಗೈಕ್ಯ ಕೆ.ಜಿ.ಕಲ್ಲಪ್ಪ ಹಾಗೂ ಲಿಂಗೈಕ್ಯ ಕೆ.ಜಿ.ಲೋಕೇಶ್ವರಮ್ಮ ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 'ಆನು ಒಲಿದಂತೆ ಹಾಡುವೆನು' ವಿಷಯ ಕುರಿತಂತೆ ಅನುಶ್ರೀ ಸಂಗೀತ ಶಾಲೆಯ ವೀಣಾ ಹೆಗಡೆ ದತ್ತಿ ಉಪನ್ಯಾಸ ನೀಡಿದರು. ದತ್ತಿ ದಾನಿಗಳಾದ ಸಾವಿತ್ರಮ್ಮ ಸಿದ್ದಪ್ಪ ಮತ್ತು ಕೆ.ಜಿ. ಸದಾನಂದ ಸಹೋದರರು, ಪಲ್ಲವಿ ಪಾಟೀಲ್ ಉಪಸ್ಥಿತರಿದ್ದರು. ಕದಳಿ ವೇದಿಕೆ ಜಿಲ್ಲಾಧ್ಯಕ್ಷರಾದ ವಿನೋದ ಅಜಗಣ್ಣನವರ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಕದಳಿ ವೇದಿಕೆ ತಾಲ್ಲೂಕು ಅಧ್ಯಕ್ಷೆ ಗಾಯತ್ರಿ ವಸ್ತ್ರದ್, ನಿಕಟ ಪೂರ್ವ ಅಧ್ಯಕ್ಷರಾದ ಕುಸುಮಾ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಅತಿಥಿಗಳ ಪರಿಚಯವನ್ನು ಮಮತಾ ನಾಗರಾಜ್ ಮಾಡಿದರು. ಸೌಮ್ಯ ಸತೀಶ್ ಸ್ವಾಗತಿಸಿದರು. ವಾಣಿ ರಾಜ್ ವಂದಿಸಿದರು.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಚಂದ್ರಿಕಾ ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ದೇಶಭಕ್ತಿ ಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

## ನಗರಸಭಾ ಕಾರ್ಯಾಲಯ, ಹರಿಹರ-577601.

ಫೋ:08192-244266 ಫ್ಯಾಕ್ಸ್:08192-241024
E-mail ID no:itstaff_ulb_harihara@yahoo.com

ನಸಹ/ತಾಂತ್ರಿಕ/ಎಸ್‌ಟಿಪಿ/ಸಿಆರ್-01/2023-24 ದಿ:07-10-2023

### ದರಪಟ್ಟಿ ಪ್ರಕಟಣೆ (ಡೇಟಾಬೇಸ್)

ಹರಿಹರ ನಗರಸಭೆಯ ರೊಚ್ಚು ನೀರು ಸಂಸ್ಕರಣಾ ಘಟಕದಲ್ಲಿ ರೀಸೀವಿಂಗ್ ವೆಟ್‌ವೆಲ್‌ನ 70 ಹೆಚ್.ಪಿ ನಾನ್‌ಕ್ಲಾಗ್, ಸಬ್‌ಮರ್ಸಿಬಲ್ ಮೋಟಾರ್ ದುರಸ್ಥಿ ಪಡಿಸುವ ಕಾಮಗಾರಿಗೆ ಆಸಕ್ತಿಯುಳ್ಳ ಸಬ್‌ಮರ್ಸಿಬಲ್ ಮೋಟಾರ್ ದುರಸ್ಥಿದಾರರು/ಗುತ್ತಿಗೆದಾರರು ತಮ್ಮ ದರಪಟ್ಟಿಯ ವಿವರವನ್ನು ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಈ ಕೆಳಕಂಡ ಕಾಮಗಾರಿಗೆ ಸಂಬಂಧಪಟ್ಟ ಅಭಿಯಂತರರಿಂದ ತೆಗೆದುಕೊಂಡು ದರಗಳನ್ನು ಜಿಎಸ್‌ಟಿ ಹಾಗೂ ಇತರೆ ತೆರಿಗೆ ಸೇರಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ತಮ್ಮ ದರಪಟ್ಟಿಯನ್ನು ದಿನಾಂಕ: 13-10-2023ರ ಸಾಯಂಕಾಲ 5.00 ಗಂಟೆಯೊಳಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸುವುದು ವೇಳೆ ಮೀರಿ ಬರವ ದರ ಪಟ್ಟಿಗಳನ್ನು ಅಂಗೀಕರಿಸಲಾಗುವುದಿಲ್ಲ. ದುರಸ್ಥಿಗೊಳಿಸಬೇಕಾದ ಸಾಮಗ್ರಿ ವಿವರ:-

**Repair of 70HP Non clog Submursible pumpset (Kishore 70HP, 550 m3/hr/19mtr) of following items:-**
(1) Cable sealing ring/Neiprene rubber 4*1.5 ಪ್ರಮಾಣ:- 1 No (2) cable clamp PH screw+Hex nut/MSG / 3.5*10.3,5*16.3,5*25 ಪ್ರಮಾಣ:- 01 No (3) Bearing / Bearing steel /6007 2RS C3 ಪ್ರಮಾಣ:- 01 No. (4) Pump Mechanical seal SiC/Sic/ MG1 80mm ಪ್ರಮಾಣ:- 01 No (5) Motor Mech, Seal/C/Sic/MG1 80mm ಪ್ರಮಾಣ:- 01 No (6) Oil / Turbinol-46 ಪ್ರಮಾಣ:-01 Ltr (7) Electrode Bush/Silicon Rubber/8x20x26 ಪ್ರವಾಣ:-01 No (8) Startor Winding/Cu.H/225/4-270 ಪ್ರಮಾಣ:-01 Set (9) Oil&Air Plug/SS316/1/4"BSP ಪ್ರವಾಣ:-01 Set (10) Fastner Set /SS316/225D ಪ್ರಮಾಣ:- 01 Set (11) O-Ring set /Nitrile Rubber/IEC-225 ಪ್ರಮಾಣ:-01 No (12) Circlip Set /Spring steel/IEC-225 ಪ್ರಮಾಣ:-01 Set (13) Terminal Strip/Moulded Plastic/Frame=225 ಪ್ರಮಾಣ:-01 Set (14) BearingSet / Bearing steel IEC-225 ಪ್ರಮಾಣ:-01 Set (15) Cable sealing ring /Neoprene Rubber/3.5x16 ಪ್ರಮಾಣ:-01 No (16) Cable Gland/CA15/3.5x16 ಪ್ರಮಾಣ:-01 No (17) Profile Gasket /Neoprene rubber/200x20 ಪ್ರಮಾಣ:-01 No (18) Cable Entry kit/ Neoprene rubber / 2x(3.5x16)+1x4x1.5) ಪ್ರಮಾಣ:-01 Set (19) Cable set - 10Mtr/PVC+Cu 2Sheathed/4x1.5 ಪ್ರಮಾಣ:-01 Set (20) Power cable -20Mtrs/PVC+Cu 2Sheathed/2x(3.5x16) ಪ್ರಮಾಣ:-01 Set (21) Fastner Set /SS316/200-360,70M ಪ್ರಮಾಣ:-10 Set (22) Cable Clamp+PH Screw+Hex.Nut/ MSG/3.5x70 ಪ್ರಮಾಣ:-01 No (23) Cable Gland/CA-15/ 4x1.5 ಪ್ರಮಾಣ:-01 No (24) 70Hp Motor Lifting charges with crane at STP Main Wetwell ಪ್ರಮಾಣ:-01 Set (25) Transportation of 70HP motor from STP to workshop & return to STP site with suitable packing ಪ್ರಮಾಣ:-01 Set (26 ) 70Hp Motor Erection charges with crane at STP Main Wetwell ಪ್ರಮಾಣ:- 01 Set

ವಾಸಾಇ/ಡಿವಿಜಿ/279/ ಕೆಎಸ್‌ಎಂಸಿಎ/2023-24

ಸಹಿ/-ಪೌರಾಯುಕ್ತರು,
ನಗರಸಭೆ, ಹರಿಹರ.

## ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ಪಿ.ಬಿ. ರಸ್ತೆ, ದಾವಣಗೆರೆ.

**ನಿಯಮ 8(1) ಪರಿಶಿಷ್ಟ 4**
**-: ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸು :-**

ಸೆಕ್ಯೂರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳ ಸಹಿದಾರರು, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಮತ್ತು 9 ಓದಿಕೊಂಡಂತೆ ಕಲಂ 13(12) ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 05.06.2023ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ನೋಟೀಸಿನ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಾಗಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4)ರನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿನಾಂಕ:04.08.2023ರಂದು ಈ ಕೆಳಕಂಡ ಸ್ವತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸೊತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸೊತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ದಿ ದಾವಣಗೆರೆ ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ :**

1. **ಶ್ರೀ ಐ ಸಲಾಂ ಸಾಬ್ ಬಿನ್ ಶ್ರೀ ಖಾಸಿಂ ಸಾಹೇಬ್**, # 68, 1ನೇ ವಾರ್ಡ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಅರಸೀಕೆರೆ.

ಆಸ್ತಿಯ ಮಾಲೀಕರಾದ 1. ಶ್ರೀಮತಿ ಖಮರುನ್ ಬೀ ಕೋಂ. ಶ್ರೀ ಮೆಹಬೂಬ್ ಸಾಬ್, ದುರ್ಗಾಂಬಿಕಾ ಬಡಾವಣೆ, ಮೇನ್ ರೋಡ್, ನಿಟುವಳ್ಳಿ, ದಾವಣಗೆರೆ.

2. ಶ್ರೀ ಮುಸ್ತಾಫ್ ಬಿನ್ ಶ್ರೀ ಮೆಹಬೂಬ್ ಸಾಬ್, ದುರ್ಗಾಂಬಿಕಾ ಬಡಾವಣೆ, ಮೇನ್ ರೋಡ್, ನಿಟುವಳ್ಳಿ, ದಾವಣಗೆರೆ.

2. ಸಾಲದ ಖಾತೆ ಸಂಖ್ಯೆ : ಕಟ್ಟಡ ಅಡವು ಸಾಲ ನಂ. 490 ಬರಬೇಕಾದ ಸಾಲದ ಬಾಕಿ ಅಸಲು ರೂ. 15,32,467=24+ಬಡ್ಡಿ ರೂ. 86,958=00 (31.07.2023ರವರೆಗೆ) + ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚು

**ಜಾಮೀನುದಾರರ ಹೆಸರು ಮತ್ತು ವಿಳಾಸ :**

1. ಶ್ರೀ ಎಸ್. ಮಂಜುನಾಥ ಬಿನ್ ಬಸಪ್ಪ, ಕಮ್ಮತ್ತಹಳ್ಳಿ, ಕಂಬತ್ರಹಳ್ಳಿ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ.
2. ಶ್ರೀ ಜಿ.ಎಂ. ಕುಮಾರ್‌ಸ್ವಾಮಿ ಬಿನ್ ಮರುಳಸಿದ್ದಯ್ಯ, ತಲಿಕ ಕಮ್ಮತ್ತಹಳ್ಳಿ, ಕಂಬತ್ರಹಳ್ಳಿ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ.

**ಬ್ಯಾಂಕಿಗೆ ಆಧಾರದ ಸ್ಥಿರಾಸ್ತಿಗಳ ವಿವರ :**

ದಾವಣಗೆರೆ ನಗರದ ನೋಂದಣಾಧಿಕಾರಿಗಳ ಕಛೇರಿಗೆ ಒಳಪಟ್ಟು ದಾವಣಗೆರೆ ನಗರದ ದುರ್ಗಾಂಬಿಕಾ ಬಡಾವಣೆ ಮುಖ್ಯರಸ್ತೆ, ನಿಟುವಳ್ಳಿಯಲ್ಲಿ ಬರುವ ವಾಣಿಜ್ಯ ಮತ್ತು ವಾಸದ ಮನೆ, ನಿವೇಶನ ಸಂಖ್ಯೆ, ಅವುಗಳ ಅಳತೆ ಡೋರ್ ನಂಬರ್ ಈ ಕೆಳಗಿನಂತಿದೆ.

1. ಸೈಟ್ ಸಂಖ್ಯೆ 3 ಮಹಾನಗರ ಪಾಲಿಕೆಯ ಡೋರ್ ನಂ. 479/ಎ+ಬಿ3, ನಿವೇಶನದ ಅಳತೆ 30x15 ಅಡಿ ಒಟ್ಟು ಅಳತೆ 450 ಚದುರಡಿಗಳು
2. ಸೈಟು ಸಂಖ್ಯೆ 4 ಮಹಾನಗರ ಪಾಲಿಕೆಯ ಡೋರ್ ನಂ. 479/ಎ+ಬಿ4, ನಿವೇಶನ ಅಳತೆ 30x15 ಅಡಿ ಒಟ್ಟು ಅಳತೆ 450 ಚದುರಡಿಗಳು

ಈ ಎರಡೂ ನಿವೇಶನಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಇವುಗಳ ಒಟ್ಟು ಅಳತೆ 30x30 ಅಡಿ= 900 ಚದುರಡಿಗಳು. ಈ ನಿವೇಶನದಲ್ಲಿ ನೆಲ ಮಹಡಿ ಆರ್‌ಸಿಸಿ ಕಟ್ಟಡವಾಗಿದ್ದು, ಒಂದನೇ ಮಹಡಿ ಎ.ಸಿ. ಶೀಟ್‌ಗಳಿಂದ ಕಟ್ಟಲಾಗಿದೆ. ಇದಕ್ಕೆ ಚೆಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ ನಂ. 8, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ :ನಿವೇಶನ ಸಂಖ್ಯೆ ನಂ. 5.

ದಿನಾಂಕ :11.10.2023
ಸ್ಥಳ : ದಾವಣಗೆರೆ

ಸಹಿ/- (ಎನ್. ತುಳಸಿನಾಥ),
ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು,
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

# ರೈತರಿಗೆ 7 ಗಂಟೆ ವಿದ್ಯುತ್ ಕೊಡದಿದ್ದರೆ ಉಗ್ರ ಪ್ರತಿಭಟನೆ


ಬೆಂಗಳೂರು, ಅ.11 - ಸರ್ಕಾರ ರೈತರಿಗೆ ಏಳು ಗಂಟೆ ಮೂರು ಫೇಸ್ ವಿದ್ಯುತ್ ನೀಡದಿದ್ದರೆ, ವಿದ್ಯುತ್ ಕಚೇರಿಗಳಿಗೆ ಬೀಗ ಹಾಕಿ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರೆಂಟ್ ಪಡೆಯುವುದು ನಮ್ಮ ಹಕ್ಕು, ಅಕ್ಕಿ ಪಡೆಯುವುದು ನಮ್ಮ ಹಕ್ಕು. ಕಾಂಗ್ರೆಸ್ ಸರ್ಕಾರ ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದೆ. ಕರೆಂಟ್ ಕೊಡುವುದು ಸರ್ಕಾರದ ಕರ್ತವ್ಯ. ಅದು ಉಪಕಾರ ಅಲ್ಲ. ಈಗ ಇಂಧನ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಅಂತ ಅಧಿಕಾರಿಗಳನ್ನು ಕೇಳಿ ಹೇಳುತ್ತಾರೆ ಎಂದರು.

ನಾನು ಅಧಿಕಾರದಲ್ಲಿದ್ದಾಗ ವಿದ್ಯುತ್ ಇಲಾಖೆಗೆ ಹತ್ತು ಸಾವಿರ ಕೋಟಿ ರೂ. ನೀಡಿದ್ದೆ. ಇವರು ಯಾವುದೇ ಅನುದಾನ ನೀಡಿಲ್ಲ. ಅನುದಾನ ನೀಡಲು ಇವರ ಬಳಿ ಹಣ ಇಲ್ಲ. ಕಲ್ಲಿದ್ದಲು ಖರೀದಿಸಲು ಹಣ ಇಲ್ಲ.

ಸರ್ಕಾರದವರು ರೈತರಿಗೆ ಕೇವಲ ಎರಡು ತಾಸು ಕರೆಂಟ್ ಕೊಡುತ್ತಿದ್ದಾರೆ. ಮೂರು ತಿಂಗಳಲ್ಲಿ ಎರಡು ಬಾರಿ ಕರೆಂಟ್ ಬಿಲ್ ಹೆಚ್ಚಿಸಿದ್ದು, ಇದು ರೈತ ವಿರೋಧಿ ಸರ್ಕಾರ ಎಂದು ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹತ್ತು ಕೆಜಿ ಅಕ್ಕಿ ಕೊಡುವುದಾಗಿ ಹೇಳಿದ್ದರು. ಈಗ



ಮೂರು ಕೆಜಿ ಅಕ್ಕಿ ಕೊಡುತ್ತಿದ್ದಾರೆ. ಇವರು ಸುಳ್ಳು ಹೇಳಿದ್ದಾರೆ. ಮೋಸ ಮಾಡಿದ್ದಾರೆ. ನಾವು ಡಿಸೆಂಬರ್ ವರೆಗೆ 10 ಕೆಜಿ ಅಕ್ಕಿ ಕೊಟ್ಟಿದ್ದೆವು.

ನಂತರ ಐದು ಕೆಜಿ ಅಕ್ಕಿ ಒಂದು ಕೆಜಿ ರಾಗಿ ಕೊಟ್ಟೆವು. ಆದರೂ, ನಮಗೆ ಆಶೀರ್ವಾದ ಮಾಡಲಿಲ್ಲ. ಮೂರು ಕೆಜಿ ಕೊಡುವ ಇವರನ್ನು ಏನು ಮಾಡಬೇಕು.

ಇವರ ವಿರುದ್ಧ ಪ್ರತಿಭಟನೆ ಮಾಡಬೇಕಾ, ಬೇಡವಾ? ಗೃಹ ಲಕ್ಷ್ಮಿ ಕೊಡುವುದಾಗಿ ಹೇಳಿದ್ದರು. ಈಗ ಹೆಣ್ಣು ಮಕ್ಕಳು ಬ್ಯಾಂಕ್ ಮುಂದೆ ಕ್ಯೂ ನಿಲ್ಲುವಂತಾಗಿದೆ.

ಸರ್ಕಾರ ರೈತರಿಗೆ ನಿರಂತರವಾಗಿ ಏಳು ತಾಸು ಕರೆಂಟ್ ಕೊಡದಿದ್ದರೆ, ವಿದ್ಯುತ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ಮಾಡುತ್ತೇವೆ. ನೀವು ಎಷ್ಟು ಜನರ ಮೇಲೆ ಕೇಸ್ ಹಾಕುತ್ತೀರಿ, ಎಷ್ಟು ಜನರನ್ನು ಜೈಲಿಗೆ ಹಾಕುತ್ತೀರಿ ನೀವೇ ಬಿಟ್ಟು ಕಳುಹಿಸಬೇಕು ಅಷ್ಟು ಜನ ಜೈಲಿಗೆ ಹೋಗುತ್ತೇವೆ ಎಂದು ಗುಡುಗಿದರು.

# ಮೂಲ ಶಿಕ್ಷಣ ಪ್ರತಿಪಾದಿಸಿದ ಮೊದಲ ಶಿಕ್ಷಣ ತಜ್ಞ ಗಾಂಧೀಜಿ



**ಈಶ್ವರಮ್ಮ ಶಾಲೆಯ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್**

ದಾವಣಗೆರೆ, ಅ. 11 - ಸ್ವಾತಂತ್ರ್ಯ ಭಾರತದಲ್ಲಿ ಮೂಲ ಶಿಕ್ಷಣ ಪ್ರತಿಪಾದಿಸಿದ ಮೊದಲ ಶಿಕ್ಷಣ ತಜ್ಞ ಮಹಾತ್ಮ ಗಾಂಧೀಜಿ ಎಂದು ಈಶ್ವರಮ್ಮ ಶಾಲೆಯ ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್ ಹೇಳಿದರು.

ನಗರದ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶ ಕಂಡ ಮಹಾನ್ ವ್ಯಕ್ತಿಗಳಲ್ಲಿ ಗಾಂಧೀಜಿ ಮತ್ತು ಶಾಸ್ತ್ರೀಜಿಯವರು ಪ್ರಮುಖರು ಎಂದು ತಿಳಿಸಿದರು.

ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಲ್ಲಿದ್ದ ರಾಜಕೀಯ ನಾಯಕ. ಸತ್ಯಾಗ್ರಹ ಮತ್ತು ಅಹಿಂಸೆ ಎಂಬ ಎರಡು ಆಯುಧಗಳಿಂದ ಬ್ರಿಟಿಷ್ ಸಾರ್ವಭೌಮತ್ವವನ್ನು ಮಣಿಸಿದರು. ಗಾಂಧಿ ತತ್ವಗಳು ಮತ್ತು ಅವರ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದರು.

ಸ್ವಾತಂತ್ರ್ಯ ಭಾರತದಲ್ಲಿ ಮೂಲ ಶಿಕ್ಷಣವನ್ನು ಜಾರಿಗೆ ತಂದು ಪ್ರತಿಪಾದಿಸಿದ ಸ್ವಾವಲಂಬಿ ಭಾರತವನ್ನು ಕಟ್ಟಲು ಮೂಲ ಶಿಕ್ಷಣ ಅವಶ್ಯಕ ಎಂದು ತಿಳಿಸಿದವರು ಗಾಂಧೀಜಿಯವರು ಎಂದು ತಿಳಿಸಿದರು.

ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರಲ್ಲಿ ಅನೇಕ ಆದರ್ಶಗಳ ಸಾಮ್ಯತೆ ಇದೆ. ಗಾಂಧಿ ತತ್ವಗಳನ್ನು ಪಾಲಿಸುತ್ತಾ, ಸ್ವಾತಂತ್ರ್ಯ ಭಾರತದ ಎರಡನೇ ಪ್ರಧಾನಿಯಾಗಿ ಪ್ರಾಮಾಣಿಕತೆ, ಸರಳತೆ ಮತ್ತು ಸ್ವಾಭಿಮಾನಗಳೇ ಮೈದಳೆದಂತೆ ಇದ್ದವರು ಶಾಸ್ತ್ರೀಜಿಯವರು. ಗಾಂಧೀಜಿಯವರ ಅಹಿಂಸಾತ್ಮಕ ತತ್ವಗಳಲ್ಲಿ ನಂಬಿಕೆ ಇಟ್ಟು, ಸ್ವಾತಂತ್ರ್ಯಕ್ಕೆ ಹೋರಾಡಿದ ಧೀಮಂತ ಸೇನಾನಿ ಶಾಸ್ತ್ರೀಜಿಯವರು. ದೈಹಿಕವಾಗಿ ವಾಮನನಂತಿದ್ದರೂ ನಿರ್ಧಾರ ತೆಗೆದುಕೊಳ್ಳುವಲ್ಲಿ ಶಾಸ್ತ್ರೀಜಿಯವರು ತ್ರಿವಿಕ್ರಮನಾಗಿದ್ದರು ಎಂದರು.

ಪ್ರೌಢಶಾಲಾ ಶಿಕ್ಷಕಿ ಆಶಾ ಗಾಂಧೀಜಿಯವರ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳು ಗಾಂಧಿ ಭಜನೆಗಳ ಹಾಡುಗಳನ್ನು ಹಾಡಿದರು. ಶಾಲೆಯ ಹಿರಿಯ ಶಿಕ್ಷಕಿ ಸಬೀನಾಬಾನು ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು. ಶಿಕ್ಷಕಿ ಅಪೂರ್ವ ನಿರೂಪಿಸಿದರು. ರೇಖಾ ಸ್ವಾಗತಿಸಿದರು. ಶಿಕ್ಷಕಿ ಜ್ಯೋತಿ ವಂದಿಸಿದರು.

## ಬಾಪೂಜಿ ಹಿ. ಪ್ರಾ. ಶಾಲೆಯಲ್ಲಿ ವಿಪತ್ತು ಸ್ಪಂದನ ಪಡೆ ಪ್ರಾತ್ಯಕ್ಷಿಕೆ



ದಾವಣಗೆರೆ, ಅ.11- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ ನೇತೃತ್ವದಲ್ಲಿ ಇಲಾಖೆಯ ಸಿಬ್ಬಂದಿಗಳು ಪ್ರಕೃತಿಯಲ್ಲಿ ಸಂಭವಿಸುವಂತಹ ವಿಪತ್ತುಗಳನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು, ಪ್ರಾಚಾರ್ಯರಾದ ಜೆ. ಎಸ್. ವನಿತಾ, ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

## ದೇಶಗಳಿಗಿಂತ ಹೆಚ್ಚು ವಿದ್ಯುತ್ ಬಳಸಲಿರುವ ಎ.ಐ.!

ನವದೆಹಲಿ, ಅ. 11 – ಬರುವ 2027ರ ವೇಳೆಗೆ ಕೃತಕ ಬುದ್ಧಿವಂತಿಕೆ ಸಂಬಂಧಿತ ಚಟುವಟಿಕೆಗೆ ಬಳಸುವ ವಿದ್ಯುತ್ ಪ್ರಮಾಣ ನೆದರ್‌ಲ್ಯಾಂಡ್, ಅರ್ಜೆಂಟಿನಾ ಹಾಗೂ ಸ್ವೀಡನ್ ರೀತಿಯ ದೇಶಗಳ ಒಟ್ಟು ಬಳಕೆಯನ್ನು ಮೀರಿಸಲಿದೆ ಎಂದು ನೂತನ ಅಧ್ಯಯನವೊಂದು ತಿಳಿಸಿದೆ.

ಕೃತಕ ಬುದ್ಧಿವಂತಿಕೆ (ಎ.ಐ.) ದೊಡ್ಡ ಪ್ರಮಾಣದಲ್ಲಿ ಬಳಕೆಯಾಗುವತ್ತ ಹೆಜ್ಜೆ ಹಾಕುತ್ತಿದೆ. 2022ರ ನಂತರ ಚಾಟ್‌ಜಿಪಿಟಿ ರೀತಿಯ ತಂತ್ರಜ್ಞಾನಗಳು ಹೆಚ್ಚು ಜನಪ್ರಿಯವಾಗುತ್ತಿವೆ ಎಂದು ಜೌಲೆ ನಿಯತಕಾಲಿಕದ ವರದಿ ತಿಳಿಸಿದೆ.

ಚಾಟ್‌ಜಿಪಿಟಿ ರೀತಿಯ ಉಪಕರಣಗಳನ್ನು ಸಿದ್ಧಪಡಿಸುವುದಕ್ಕೆ ಸಾಕಷ್ಟು ಸಂಪನ್ಮೂಲ ಬೇಕಾಗುತ್ತದೆ ಎಂದು ವರದಿ ರೂಪಿಸಿರುವ ತಂಡದಲ್ಲಿರುವ ನೆದರ್‌ಲ್ಯಾಂಡ್‌ನ ವಿರ್ಜೆ ವಿಶ್ವವಿದ್ಯಾಲಯದ ಸಂಶೋಧಕ ಅಲೆಕ್ಸ್ ಡೆವ್ರೀಸ್ ಹೇಳಿದ್ದಾರೆ.

ನ್ಯೂಯಾರ್ಕ್‌ನ ಎ.ಐ. ಕಂಪನಿಯಾದ ಹಗ್ಗಿಂಗ್ ಫೇಸ್, ಎ.ಐ. ಉಪಕರಣವೊಂದನ್ನು ರೂಪಿಸಿತ್ತು. ಇದಕ್ಕಾಗಿ 433 ಮೆಗಾವ್ಯಾಟ್ ವಿದ್ಯುತ್ ಬಳಕೆಯಾಗಿತ್ತು ಎಂದು ಡೆವ್ರೀಸ್ ಹೇಳಿದ್ದಾರೆ. ಅಲ್ಲದೇ ಎ.ಐ. ಉಪಕರಣಗಳಿಗೆ ಸಾಕಷ್ಟು ಕಂಪ್ಯೂಟರ್ ಸಂಪನ್ಮೂಲ ಬೇಕಾಗುತ್ತದೆ. ಹೀಗಾಗಿ ಪ್ರತಿ ಬಾರಿ ಕೃತಕ ಬುದ್ಧಿವಂತಿಕೆ ಬಳಸಿದಾಗ ಸಾಕಷ್ಟು ವಿದ್ಯುತ್ ಬಳಕೆಯಾಗುತ್ತದೆ. ಚಾಟ್‌ಜಿಪಿಟಿ ದಿನಕ್ಕೆ 564 ಮೆಗಾವ್ಯಾಟ್ ವಿದ್ಯುತ್ ಬಳಸುತ್ತದೆ ಎಂದವರು ಹೇಳಿದ್ದಾರೆ.

ಗೂಗಲ್ ಪ್ರತಿದಿನ 9 ಶತಕೋಟಿ ಶೋಧಗಳನ್ನು ನಿರ್ವಹಿಸುತ್ತದೆ. ಇದು ಎ.ಐ. ಬಳಸಿಕೊಂಡಲ್ಲಿ ವರ್ಷಕ್ಕೆ 30 ಟೆರಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಇದು ಐರ್‌ಲ್ಯಾಂಡ್ ದೇಶದ ವಾರ್ಷಿಕ ವಿದ್ಯುತ್ ಬಳಕೆಗೆ ಸಮನಾಗಿದೆ.

ಪ್ರಸಕ್ತ ಇ-ಮೇಲ್ ಸೇವೆಗಾಗಿ ಗೂಗಲ್ ಎ.ಐ. ಬಳಸಿಕೊಳ್ಳುತ್ತಿದೆ. ಶೋಧಕ್ಕೂ ಎ.ಐ. ಬಳಸುವ ಬಗ್ಗೆ ಪರೀಕ್ಷೆ ನಡೆಸುತ್ತಿದೆ. 2027ರ ವೇಳೆಗೆ ವಿಶ್ವದಾದ್ಯಂತ ಎ.ಐ. ಆಧರಿತ ತಂತ್ರಜ್ಞಾನಕ್ಕೆ 85 ರಿಂದ 134 ಟೆರಾವ್ಯಾಟ್ ವಿದ್ಯುತ್ ಅಗತ್ಯವಾಗಲಿದೆ. ಈ ಹಿನ್ನೆಲೆಯಲ್ಲಿ, ಎ.ಐ.ಗೆ ಅಗತ್ಯವಾಗುವ ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್ ಪ್ರಮಾಣ ಇಳಿಕೆ ಮಾಡಲು ಕಂಪನಿಗಳು ಒತ್ತು ನೀಡುತ್ತಿವೆ.

ಎ.ಐ. ಉಪಕರಣಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ವಿದ್ಯುತ್ ಬೇಡಿಕೆ ಗಣನೀಯವಾಗಿ ಹೆಚ್ಚಾಗಲಿದೆ. ಹೀಗಾಗಿಯೇ ಎ.ಐ. ಬಳಕೆಯ ಬಗ್ಗೆ ನಾವು ಹೆಚ್ಚು ಎಚ್ಚರಿಕೆ ವಹಿಸಬೇಕಿದೆ ಎಂದು ಡೆವ್ರೀಸ್ ತಿಳಿಸಿದ್ದಾರೆ.

## ಮೇರಾ ಯುವ ಭಾರತ್‌ಗೆ ಕೇಂದ್ರ ಸಂಪುಟ ಒಪ್ಪಿಗೆ

(1ನೇ ಪುಟದಿಂದ) 10-19 ವರ್ಷದ ಹದಿಹರೆಯದ ಗುಂಪಿಗಾಗಿ ಪ್ರತ್ಯೇಕ ಯೋಜನೆಯೂ ಇರಲಿದೆ.

ಈ ಸಂಸ್ಥೆಯ ಮೂಲಕ ಯುವಕರಲ್ಲಿ ನಾಯಕತ್ವ ಬೆಳೆಸಲಾಗುವುದು. ಯುವ ಪೀಳಿಗೆ ಹಾಗೂ ಸಚಿವಾಲಯದ ನಡುವೆ ನೇರ ಸಂಪರ್ಕ ಏರ್ಪಡಲಿದೆ. ಕೇಂದ್ರೀಕೃತ ಯುವ ಪೀಳಿಗೆ ಮಾಹಿತಿ ರೂಪಿಸಲಾಗುವುದು.

## ಪಟಾಕಿಯಂತೆ 'ಡಿಜೆ' ನಿಷೇಧಿಸಬೇಕು ರವೀಂದ್ರಗೌಡ ಪಾಟೀಲ ಒತ್ತಾಯ

**ರಾಣೇಬೆನ್ನೂರು**

ರಾಣೇಬೆನ್ನೂರು, ಅ.11- ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವ ಪಟಾಕಿ ನಿಷೇದವನ್ನು ತಡಮಾಡಿಯಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸುಪ್ರಿಂ ಕೋರ್ಟಿನ ಆದೇಶವನ್ನು ಪಾಲಿಸಲು ಮುಂದಾಗಿರುವುದು ನಿಟ್ಟುಸಿರು ಬಿಡುವಂತಾಗಿದೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರವೀಂದ್ರಗೌಡ, ಇತ್ತೀಚಿನ ದಿನಗಳಲ್ಲಿ ಪಟಾಕಿ ಸಿಡಿಸುವ ಭರದಲ್ಲಿ ಆಗುತ್ತಿರುವ ಅನಾಹುತ, ಪಟಾಕಿ ಕಂಪನಿ, ಗೋದಾಮುಗಳಲ್ಲಿ ಸಂಭವಿಸುವ ಜೀವ ಹಾನಿಯಾಗುವ ಘಟನೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮೊನ್ನೆ ಬೆಂಗಳೂರಿನ ಅತ್ತಿಬೆಲೆಯಲ್ಲಿ ನಡೆದ ಪಟಾಕಿ ದುರಂತದಿಂದ ಅಮಾಯಕ 14 ಮಂದಿ ಸಜೀವ ದಹನವಾಗಿದ್ದು, ಇದರಿಂದ ಇಡೀ ದೇಶವೇ ತಲ್ಲಣಗೊಂಡಿದೆ. ಇನ್ನು ದೀಪಾವಳಿ, ಗಣೇಶೋತ್ಸವ ಮುಂತಾದ ಹಬ್ಬ, ಹರಿದಿನಗಳಲ್ಲಿ ಪ್ರತಿ ಬಾರಿ ನೂರಾರು ಮುಗ್ಧ ಮಕ್ಕಳು ಅನಾಹುತ ಮಾಡಿಕೊಳ್ಳುತ್ತಿದ್ದಾರೆ.

ಪಟಾಕಿ ನಿಷೇಧದಂತೆ ಮನುಕುಲಕ್ಕೆ ಮಾರಕವಾಗಿರುವ, ಸಾಮಾಜದ ಸ್ವಾಸ್ಥ್ಯತೆ ಹದಗೆಡಿಸುವ ಭವ್ಯ ಭಾರತದ ಶ್ರೀಮಂತ ಸಂಸ್ಕೃತಿಯನ್ನೇ ಹಾಳು ಮಾಡುತ್ತಿರುವ ಮತ್ತು ಹೃದಯ ಬೇನೆಯಿಂದ ಬಳಲುತ್ತಿರುವವರ ಹಾಗೂ 'ಹಾಟ್ ವೀಕ್' ಇರುವ ಅಮಾಯಕ ರೋಗಿಗಳ, ಹಸುಗೂಸುಗಳ, ಗರ್ಭಿಣಿಯರಿಗೆ ಸಾಕಷ್ಟು ಕಿರಿ ಕಿರಿ, ತೊಂದರೆ, ಮೆರವಣಿಗೆ ಸಂದರ್ಭದಲ್ಲಿ ಎಷ್ಟೋ ಅಮಾಯಕರು ಪ್ರಾಣ ತೆಗೆಯುತ್ತಿರುವ ಈ ಡಿ.ಜೆ.ಯನ್ನೂ ಕೂಡಾ ಶಾಶ್ವತವಾಗಿ ನಿಷೇಧಿಸಬೇಕೆಂದು ಅವರು ಸಿ.ಎಂ. ಸಿದ್ದರಾಮಯ್ಯ, ಡಿ.ಸಿ.ಎಂ. ಡಿ.ಕೆ. ಶಿವಕುಮಾರ್‌ರವರಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ.

## ದಾಳಿಯಲ್ಲಿ ನಾಶವಾಗುತ್ತಿರುವ ಗಾಜಾ ಬಡಾವಣೆಗಳು

(1ನೇ ಪುಟದಿಂದ) ಕಷ್ಟಪಡುತ್ತಿದ್ದಾರೆ ಎಂದು ಹಮಾಸ್ ನಡೆಸುವ ಗೃಹ ಸಚಿವಾಲಯ ಹೇಳಿದೆ.

ಗಾಜಾ ಪಟ್ಟಿಗೆ ಆಹಾರ, ನೀರು, ಇಂಧನ ಹಾಗೂ ಔಷಧ ಪೂರೈಕೆ ಮಾರ್ಗಗಳನ್ನು ಇಸ್ರೇಲ್ ಈಗಾಗಲೇ ಮುಚ್ಚಿದೆ. ಈಜಿಪ್ಟ್ ಕಡೆಯಿಂದಲೂ ಸರಕುಗಳ ಪೂರೈಕೆಗೆ ಅವಕಾಶ ಇಲ್ಲದಂತಾಗಿದೆ.

ಗಾಜಾದಲ್ಲಿರುವ ಜನರು ಈಗ ವಿಶ್ವಸಂಸ್ಥೆಯ ಶಾಲೆಗಳಲ್ಲಿ ಸೇರುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವವರು ಪರದಾಡುವಂತಾಗಿದೆ.

ಗಾಜಾದಲ್ಲಿರುವ ಏಕೈಕ ವಿದ್ಯುತ್ ಉತ್ಪಾದನಾ ಘಟಕ ಬುಧವಾರ ಮಧ್ಯಾಹ್ನ ಇಂಧನದ ಕೊರತೆಯಿಂದ ಸ್ಥಗಿತಗೊಂಡಿದೆ. ಪ್ಯಾಲೆಸ್ತೇನಿನ ಜನರು ಸಾಕಷ್ಟು ದಿನಗಳಿಂದ ಮನೆ, ಕಚೇರಿ ಹಾಗೂ ಆಸ್ಪತ್ರೆಗಳಿಗೆ ಜನರೇಟರ್‌ಗಳನ್ನು ಅವಲಂಬಿಸಿದ್ದಾರೆ. ಇಂಧನ ಇಲ್ಲದೇ ಜನರೇಟರ್‌ಗಳು ಬಂದ್ ಆಗುವಂತಾಗಿದೆ.

ಗಾಜಾದಲ್ಲಿ ವಿಶ್ವ ಆರೋಗ್ಯ ಸಂಘಟನೆಯು ಏಳು ಆಸ್ಪತ್ರೆಗಳನ್ನು ನಿರ್ವಹಿಸುತ್ತಿದೆ. ಈ ಆಸ್ಪತ್ರೆಗಳಲ್ಲಿ ಮೂರು ವಾರಗಳಿಗೆ ಇದ್ದ ತುರ್ತು ಸಂಗ್ರಹ, ಮೂರೇ ದಿನಗಳಲ್ಲಿ ಖಾಲಿಯಾಗಿದೆ ಎಂದು ಆಸ್ಪತ್ರೆಯ ನೆರವು ವಿಭಾಗದ ಮುಖ್ಯಸ್ಥ ಮಾಥಿಯಾಸ್ ಕ್ಯಾನೆಸ್ ಹೇಳಿದ್ದಾರೆ. ಪ್ರಸಕ್ತ ಅತಿ ದೊಡ್ಡ ಆಸ್ಪತ್ರೆಯಾದ ಅಲ್ - ಶಿಫಾದಲ್ಲಿ ಮಾತ್ರ ಮೂರು ದಿನಗಳಿಗೆ ಆಗುವಷ್ಟು ಇಂಧನ ಇದೆ.

ಬುಧವಾರದಂದು ಲೆಬನಾನ್ ಉಗ್ರವಾದಿ ಸಂಘಟನೆಯಾದ ಹೆಜ್ಬೊಲ್ಲಾ, ಇಸ್ರೇಲ್ ಸೈನಿಕ ಠಾಣೆಗಳ ಕಡೆಗೆ ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿ ನಡೆದಿರುವುದನ್ನು ಇಸ್ರೇಲ್ ಖಚಿತ ಪಡಿಸಿದೆಯಾದರೂ, ಸಾವು - ನೋವುಗಳಾಗಿರುವ ಬಗ್ಗೆ ಯಾವುದೇ ಟಿಪ್ಪಣಿ ಮಾಡಿಲ್ಲ.

## ನಗರದಲ್ಲಿ ಇಂದು ನೇತಾಜಿ ಸ್ಕೌಟ್ಸ್ ಗ್ರೂಪ್, ಚೇತನಾ ಗೈಡ್ ಗ್ರೂಪ್ 'ರಜತ ವೈಭವ'

ದಾವಣಗೆರೆ, ಅ.11- ನೇತಾಜಿ ಓಪನ್ ಸ್ಕೌಟ್ಸ್ ಗ್ರೂಪ್ ಮತ್ತು ಚೇತನಾ ಗೈಡ್ ಗ್ರೂಪ್‌ನ 'ರಜತ ವೈಭವ' 25ನೇ ವಾರ್ಷಿಕೋತ್ಸವ ಸಮಾರಂಭವನ್ನು ನಾಳೆ ದಿನಾಂಕ 12 ಹಾಗೂ 13ರಂದು ಪಿ.ಜೆ. ಬಡಾವಣೆಯ ಬಾಪೂಜಿ ಕೇಂದ್ರೀಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ.ಹೆಚ್. ಎಸ್. ಮಂಜುನಾಥ್ ಕುರ್ಕಿ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 12ರಂದು ಸಂಜೆ 5.30ಕ್ಕೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ. ಆರ್. ಸಿಂಧ್ಯಾ ಸಮಾರಂಭ ಉದ್ಘಾಟಿಸಲಿದ್ದಾರೆ. ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ. ಚಿಗಟೇರಿ, ಎಸ್.ಎಸ್. ಕೇರ್ ಲೈಫ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯರಾದ ಜಸ್ಟಿನ್ ಡಿಸೌಜ ಯಶಸ್ಸು ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಂಘಟನಾ ಆಯುಕ್ತ ಪುರುಷೋತ್ತಮ್ ಲಾಲ್ ದೂಬೆ, ರಾಜಸ್ಥಾನದ ಮುಖೇಶ್ ಜಿ ಉಪಸ್ಥಿತರಿರಲಿದ್ದಾರೆ.

ದಿ.13ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಡಿ. ಬಸವರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಿಡಿಪಿಐ ಜಿ.ಕೊಟ್ರೇಶ್, ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕಿ ಕಿರುವಾಡಿ ಗಿರಿಜಮ್ಮ, ವಿಜಯ್ ಕುಮಾರ್ ಮಿಶ್ರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಕಾರ್ಯದರ್ಶಿ ಜೆ.ಎಸ್. ವಿಜಯ್, ಕಾವೇರಿ ವಿಜಯ್, ಶಿವಮೂರ್ತಿ, ಗಜೇಂದ್ರ, ಸಂತೋಷ್ ಏಕಬೋಟೆ, ದಿಳ್ಳೆಪ್ಪ, ರಾಮಮೂರ್ತಿ ಪತ್ರಿಕಾಗೋಷ್ಠಿಯಲ್ಲಿದ್ದರು.

## ಕೊಕ್ಕನೂರಿನಲ್ಲಿ ಇಂದು ಮಹಿಳಾ ವಿಚಾರಗೋಷ್ಠಿ

ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜ್ಞಾನವಿಕಾಸ ಸಮನ್ವಯಾಧಿಕಾರಿ ಸವಿತಾ ತಿಳಿಸಿದ್ದಾರೆ.

ಉದ್ಘಾಟನೆ : ಶ್ರೀಮತಿ ಗೀತಾ, ಅಧ್ಯಕ್ಷತೆ : ಅಭಿ ಪಾಟೀಲ್, ಮುಖ್ಯ ಅತಿಥಿ : ಪಿಎಸ್‌ಐ ಪ್ರಭು, ಸಂಪನ್ಮೂಲ ವ್ಯಕ್ತಿಗಳು : ಡಾ. ಬಿ.ಟಿ.ಅರ್ಜುನ್ ಕಣಜನಹಳ್ಳಿ ನಾಗರಾಜ್, ಪ್ರಾಸ್ತಾವನೆ : ವಸಂತ್ ದೇವಾಡಿಗ.


**ಸೈಟುಗಳು ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿ ಉತ್ತರ 40x60 (ಅಕ್ಕ-ಪಕ್ಕ), 40 ಅಡಿ ರಸ್ತೆ+ ಡಾಬರ್ ರೋಡ್), ಉತ್ತರ 70x400 (ಡಬಲ್ ರೋಡ್ ಹೊಸ ಡಾಲರ್ಸ್ ಕಾಲೋನಿ) ಶಿವ ಪಾರ್ವತಿ ಪೂರ್ವ 40x55, 40x60, 30x43, ಪಶ್ಚಿಮ 30x55.
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ, ಶಿವ-ಪಾರ್ವತಿ ಲೇಔಟ್‌ನಲ್ಲಿ, 40x60 West, 40x50 Corner, 30x50 West, 40x57 East, 30x40 East, 30x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
ಸಂಬಳ : 12,000, ಸಂಪರ್ಕಿಸಿ
99017 70830
99458 29046

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್) ಎಂ.ಸಿ.ಸಿ. 'ಬಿ' ಬ್ಲಾಕ್ ಪೂರ್ವ 22x60, (ಸೈಟು ರೇಟಿಗೆ) ಎಂ.ಸಿ.ಸಿ. 'ಬಿ' ಬ್ಲಾಕ್ ಪೂರ್ವ 44x60, ಪೂರ್ವ-ದಕ್ಷಿಣ ಕಾರ್ನರ್ 44x60, ಎಂ.ಸಿ.ಸಿ. 'ಎ' ಬ್ಲಾಕ್.
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 40x80 North, 120 ಅಡಿ ರೋಡಿಗಿದೆ, 40x60, 40x60 South ಅಕ್ಕ-ಪಕ್ಕ, 30x50 West, 30x40 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಮನೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
(18 ವರ್ಷ ಮೇಲ್ಪಟ್ಟವರು )
ಸಂಪರ್ಕಿಸಿ :
74830 48533

**ಮನೆ ಬಾಡಿಗೆಗೆ/ಲೀಸ್‌ಗಿದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
ಫೋ : 63639 36547

**3BHK ಮನೆ ಲೀಜ್‌ಗೆ ಇದೆ**
KSS ಕಾಲೇಜ್ ಎದುರು ರಸ್ತೆ, 1ನೇ ಮೇನ್, 1ನೇ ಕ್ರಾಸ್, ಸರಸ್ವತಿ ನಗರ, ಬಿ ಬ್ಲಾಕ್, ದಾವಣಗೆರೆ. ಗ್ರೌಂಡ್ ಫ್ಲೋರ್, 3 ಬೆಡ್ ರೂಂ ಮನೆ ಲೀಜ್‌ಗೆ ಇದೆ.
9972956165, 9019699978

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬಾಂಡ್ ಕಳೆದಿದೆ**
ಮಂಜುನಾಥ್ ಬಿ.ಕೆ. ಬಿನ್ ಬಿ.ಕಾಡಪ್ಪ, 52 ವರ್ಷ, ಚನ್ನಗಿರಿ ತಾಲ್ಲೂಕು ಕತ್ತಲಗೆರೆ ಗ್ರಾಮದ ನಿವಾಸಿಯಾದ ನಾನು ಸುಮಾರು 50 ವರ್ಷಗಳ ಹಿಂದೆ ದಾವಣಗೆರೆ ಶುಗರ್ ಕಂಪನಿಯಲ್ಲಿ ಶೇರನ್ನು ಹೊಂದಿದ್ದು, ನನಗೆ ಬಾಂಡ್ ಕೊಟ್ಟಿರುತ್ತಾರೆ. ಬಾಂಡ್ ನಂ. ಡಿಎಸ್.ಎಂ. 0143. ಸದರಿ ಬಾಂಡ್ ಒಂದು ತಿಂಗಳ ಹಿಂದೆ ಮನೆಯನ್ನು ಸ್ವಚ್ಛ ಮಾಡುವಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಸಿಕ್ಕವರು ಹತ್ತಿರದ ಪೊಲೀಸ್ ಸ್ಟೇಷನ್‌ಗಾಗಲೀ ಈ ಕೆಳಗಿನ ನಂಬಗಾಗಲೀ ತಿಳಿಸಲು ಕೋರಿದೆ.
ಬಿ.ಕೆ. ಮಂಜುನಾಥ್
ಮೊ : 94483 23206

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ ಅಂಡ್ ರೆಸ್ಟೋರೆಂಟ್ ಹರಿಹರ
• ಬಿಲ್ಲಿಂಗ್ ಆಪರೇಟರ್ಸ್ - 4
• ಸಪ್ಲೈಯರ್ಸ್ • ವೆಂಡರ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
ಸಂಪರ್ಕಿಸಿ.
99726 98591, 94490 37488

**SPOKEN ENGLISH**
Basic, Tally + Accounting
Data Entry, DTP
ಕಲಿಯಿರಿ, ತಿಂಗಳಿಗೆ 600/-ರೂ. ಮಾತ್ರ
8197668771, 9742610385

**ನೆಲ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಡಿ.ಸಿ. ನಿವಾಸದ ಎದುರುಗಡೆ, ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ 17.5x60 ಚ.ಅ. ಜಾಗ ಬಾಡಿಗೆಗಿದೆ.
ಆಸಕ್ತರು ಸಂಪರ್ಕಿಸಿ.
91691 52666

**SHOPS FOR RENT**
Ground Floor
JINKA PLAZA
Binny Company Road, Near HDFC Bank, Davangere-1.
99001 41999

**ಸ್ವತಂತ್ರ ಉದ್ದಿಮೆಯ ಅವಕಾಶ**
ನಿಮಗೆ ನೀವೇ ಬಾಸ್ ಆಗಿ
ಪೂರಕ ಆದಾಯ ಗಳಿಸಿ, ತರಬೇತಿ ಮತ್ತು ಬೆಂಬಲ ನೀಡಲಾಗುತ್ತದೆ.
ಅಜಯ್, 96635 88115

**WANTED**
Any Degree / Diploma / Pass / Fail with Computer knowledge is must for male of Female.
Contact : Excellent Electronics
#2137/1 4th Main, 3rd Cross (Near, Puranthara Hospital) MCC 'A' Block Dvg, 577004, Tell.
98865 15100

**ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಆರ್. ಕನ್‌ಸ್ಟ್ರಕ್ಷನ್ಸ್
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ, ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಬೇಕಾಗಿದ್ದಾರೆ. ಬೆ. 10ರಿಂದ6
76769 99991, 76769 99539

**ಹುಡುಗರು ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 10,000/-
ಊಟ, ರೂಂ ಉಚಿತ.
ವಯಸ್ಸು 18 ರಿಂದ 30
97400 98047

**ಬೇಕಾಗಿದ್ದಾರೆ**
ಶ್ರೀ ಮೈಲಾರಲಿಂಗೇಶ್ವರ ನಗರ ಸಾರಿಗೆ ಡ್ರೈವರ್ ಮತ್ತು ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ.
94484 42999, 98448 42189

**ಪಾಲು ವಿಭಾಗ ಪತ್ರ ಕಳೆದಿದೆ**
ಬಿ.ಜಿ. ನಾಗರಾಜ್ ಬಿನ್ ಬಿ.ಜಿ. ಬಸವರಾಜಯ್ಯ ಹೆಸರಿನಲ್ಲಿರುವ ಪುಸ್ತಕದ ದಸ್ತಾವೇಜು ಸಂಖ್ಯೆ 6988/2001-2002 ನಂಬರಿನ ರಿಜಿಸ್ಟರ್ ನೋಂದಾಯಿತ ಪಾಲು ವಿಭಾಗ ಪತ್ರವು ದಿನಾಂಕ 4.9.2023 ರಂದು ಬಸವನಾಳ ಗ್ರಾಮದಿಂದ ಕೆಲಸದ ನಿಮಿತ್ತ ದಾವಣಗೆರೆಗೆ ಬೈಕ್‌ನಲ್ಲಿ ಹೋಗುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಿ
ಫೋ.: 97397 55666

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ನುರಿತ ಅಡುಗೆ ಮಾಡುವ ಮಹಿಳೆ ಹಾಗೂ ಕ್ಲೀನಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
99453 66847

**ಓಂ ಶ್ರೀ ಮಂಜುನಾಥ ಸರ್ವೀಸ್ ಸೆಂಟರ್**
ಅನುಭವವುಳ್ಳವರಿಂದ ಸರ್ವೀಸ್ ಅಡುಗೆ ಕೆಲಸ, ನರ್ಸಿಂಗ್ ಸೇವೆ, ವೃದ್ದರನ್ನು, ಬಾಣಂತಿ ಆರೈಕೆ, ಮಗು ಆರೈಕೆಗೆ ಸಂಪರ್ಕಿಸಿ :
74066 70523, 74834 26990

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹೆಸರು ಸ್ಪಷ್ಟೀಕರಣ**
ನಾನು ಆರ್ಷಿಯಾ ಹೆಚ್. ತಂದೆ ಅಬುತಾಲಿಬ್ ಹೆಚ್. ವಾಸ: ಯರಗುಂಟೆ ರಸ್ತೆ, ಆರ್.ಟಿ.ಓ. ಆಫೀಸ್ ಹತ್ತಿರ, ವಿಜಯನಗರ, ದಾವಣಗೆರೆ. ನನ್ನ ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿಗಳಲ್ಲಿ ಬೇಬಿ ಆರ್ಷಿಯಾ ಹೆಚ್. ಎಂದು ನಮೂದಾಗಿರುತ್ತದೆ. ನನ್ನ ನಿಜವಾದ ಹೆಸರು ಆರ್ಷಿಯಾ ಹೆಚ್. ಎಂದು ಇರುತ್ತದೆ. ಆರ್ಷಿಯಾ ಹೆಚ್. ಯಾನೆ ಬೇಬಿ ಆರ್ಷಿಯಾ ಹೆಚ್. ಈ ಎರಡು ಹೆಸರು ನನ್ನದಾಗಿರುತ್ತದೆ. ಇನ್ನೂ ಮುಂದೆ ನನ್ನ ದಾಖಲೆಗಳು ಹಾಗೂ ವ್ಯವಹಾರಗಳು ಆರ್ಷಿಯಾ ಹೆಚ್. ಎಂಬ ಹೆಸರಿನಿಂದ ಮುಂದುವರೆಸುತ್ತೇನೆ ಎಂದು ಪ್ರಮಾಣಿಕರಿಸಿದ್ದೇನೆ.
ಸಹಿ/– ಆರ್ಷಿಯಾ ಹೆಚ್.

**ಬೃಹತ್ ಭಾರತದ ಕಂಪನಿಯಲ್ಲಿ**
ಹಣ ಉಳಿತಾಯದ ಬಗ್ಗೆ ಉಚಿತವಾಗಿ ಮಾಹಿತಿ ನೀಡಲಾಗುತ್ತದೆ.
ಮಕ್ಕಳ ವಿದ್ಯಾಭ್ಯಾಸ, ಮದುವೆ, ಪಿಂಚಣಿ, ಆರೋಗ್ಯ ಮತ್ತು ಇನ್ನೂ ಇತರೆ ಹೂಡಿಕೆಯ ಬಗ್ಗೆ ವಿಚಾರಿಸಿ.
89712 81856, 88675 15890

**ಶಾಕಿರ ಬ್ಯೂಟಿ ಪಾರ್ಲರ್**
Shakeera Beauty Parlour
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಲಿಕ್ಕೆ ಸಹಾಯಕಿಯರು ಬೇಕಾಗಿದ್ದಾರೆ.
Wanted Lady Helpers
# 74 1/4, 10th Main, PJ. Extension, Davanagere. Contact :
93420 19013

**S.N ENTERPRISES**
Water Purification company in Davanagere.
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
Girls Work : Office Work and Telecalling (unmarried)
97400 29866

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Show room ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ 1850 per sq ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

**ಮಳಿಗೆ ಮಾರಾಟಕ್ಕಿದೆ**
ಕೆಎಸ್‌ಎಸ್‌ಐಡಿಸಿ ಇಂಡಸ್ಟ್ರಿಯಲ್ ಏರಿಯಾ ಸಾಗರ ರಸ್ತೆ, ಎಪಿಎಂಸಿ ಪಕ್ಕ, ಶಿವಮೊಗ್ಗದಲ್ಲಿ 50x40 ಅಡಿ ಅಳತೆಯಲ್ಲಿ 50 ಹೆಚ್‌ಪಿ ವಿದ್ಯುತ್ ಸಂಪರ್ಕವಿರುವ ಮಳಿಗೆ ಮಾರಾಟಕ್ಕಿದೆ.
86182 88005, 98444 93506

**ಕಾರ್ ಡ್ರೈವರ್ ಮತ್ತು ಮನೆ ಅಡುಗೆಗೆ ಬೇಕಾಗಿದ್ದಾರೆ**
ದ್ವಿಚಕ್ರ ವಾಹನ ಹಾಗೂ ಲೈಸನ್ಸ್ ಹೊಂದಿದ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ.
94486 56091
(ಈ ಹಿಂದೆ ಮೇಲ್ಕಂಡ ನಂಬರ್‌ಗೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)

**ಪ್ಲೈವುಡ್ ಮತ್ತು ಹಾರ್ಡ್‌ವೇರ್ ಅಂಗಡಿ ಮಾರಾಟಕ್ಕಿದೆ**
ಹದಡಿ ರಸ್ತೆಯಲ್ಲಿ ರಾಯಲ್ ಎನ್‌ಫೀಲ್ಡ್ ಶೋ ರೂಂ ಪಕ್ಕದಲ್ಲಿರುವ ಪ್ಲೈವುಡ್ ಮತ್ತು ಹಾರ್ಡ್‌ವೇರ್ ಅಂಗಡಿ ಸಾಮಾನು ಸಮೇತ ಮಾರಾಟಕ್ಕಿದೆ.
ಸಂಪರ್ಕಿಸಿ. : ಮೊ : 80732 94711

**ಬೇಕಾಗಿದ್ದಾರೆ**
ಬಿ.ಕಾಂ ಪದವೀಧರರು
ವೈಶ್ಯ ಸೌಹಾರ್ದ ಕೋ -ಆಪ್ ಲಿ.
ನರಸರಾಜ ರಸ್ತೆ, ದಾವಣಗೆರೆ.
78923 94568, 85531 86185

**FOR SALE**
35 DAYS LAB Puppies Male / Female
35 ದಿನಗಳ ಲ್ಯಾಬ್ ಮರಿಗಳು ಹೆಣ್ಣು / ಗಂಡು
ಸಂಪರ್ಕಿಸಿ.
96326 59825, 98445 69698

**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಿಕಲ್ ಸ್ಕೂಟರ್ ಕಂಪನಿಯಲ್ಲಿ ಕೆಲಸಕ್ಕೆ ಯುವಕ, ಯುವತಿಯರು ತಕ್ಷಣ ಬೇಕಾಗಿದ್ದಾರೆ. ತಿಂಗಳಿಗೆ 12,000 ರಿಂದ 25000 ದವರೆಗೆ ಸಂಬಳ ಕೊಡಲಾಗುವುದು.
73535 07622

**ಮಾರಾಟಕ್ಕೆ ಇದೆ**
ದಾವಣಗೆರೆ-ಚನ್ನಗಿರಿ ರಸ್ತೆ, ಬೈಪಾಸ್‌ನಿಂದ ಕೇವಲ 2 1/2 ಕಿ.ಮೀ. ದೂರದಲ್ಲಿ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಉತ್ತರ ಮುಖದ ರಸ್ತೆಗೆ ಹೊಂದಿರುವ ಜಮೀನು 0:10 ಗುಂಟೆ ರಸ್ತೆಗೆ 100 ಅಡಿ ಬರುವಂತಹ ಈ ಜಾಗ ಮಾರಾಟಕ್ಕೆ ಇದೆ. ಆಸಕ್ತಿಯುಳ್ಳವರು ಈ ಕೆಳಗೆ ಕೊಟ್ಟಿರುವ ನಂಬರ್‌ಗೆ ಕರೆ ಮಾಡಿ.
82175 40468

**ಬೇಕಾಗಿದ್ದಾರೆ**
ನುರಿತ ಪಂಚಕರ್ಮ ಥೆರಪಿಸ್ಟ್
ಪುರುಷರು – 1
ಮಹಿಳೆಯರು – 1
ಸಂಪರ್ಕಿಸಿ :
84978 54095

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**JOB OPPORTUNITY**
Female Office Assistant
For Reputed Educational Institution. Good In Office Work-Computer Skills Good In Customer Dealings Freshers can also apply (B.com., & M.Com.,)
for contact : 97312 18567
Send C.V-hardsoftdvg@gmail.com

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**CAREER OPPORTUNITY**
Top MNC Looking for Candidates from Banking/Finance/Insurance Industry. Age 30 above. Fixed Pay upto 75K, Huge Incentives, PF,ESI, Reward & Recognition and Foreign travel.
98806 56168

**WANTED**
Banking Sector Tele Caller (Female Only)
Qualification : Any Degree.
90715 55081
Interview Time - 11AM

**ಸೋಫೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
behind Vittal Temple, Maharaj Pet, Davanagere.
98445 81966

**NAVODAYA AND SAINIK COACHING**
4th, 5th and 8th
Nijalingappa Badavane, Davangere.
97390 66956

# ಮಾನಸಿಕ, ದೈಹಿಕ ಸಾಮರ್ಥ್ಯದತ್ತ ಇರಲಿ ಚಿತ್ತ



## ಎಡಿಜಿಪಿ ಅಲೋಕ್ ಕುಮಾರ್

ದಾವಣಗೆರೆ, ಅ. 11- ಪೊಲೀಸರು ಮಾನಸಿಕ ಮತ್ತು ದೈಹಿಕ ಸಾಮರ್ಥ್ಯದ ಕಡೆ ಹೆಚ್ಚು ಗಮನಹರಿಸಬೇಕು. ಕೌಟುಂಬಿಕ ಹಾಗೂ ವೈಯಕ್ತಿಕ ಸಮಸ್ಯೆಗಳಿಗೆ ಎದೆಗುಂದದೇ ಧೈರ್ಯದಿಂದ ಸಮರ್ಥವಾಗಿ ಎದುರಿಸಬೇಕು ಎಂದು ಬೆಂಗಳೂರಿನ ಪೊಲೀಸ್ ತರಬೇತಿ ಕೇಂದ್ರದ ಎಡಿಜಿಪಿ ಅಲೋಕ್ ಕುಮಾರ್ ಕರೆ ನೀಡಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಇಂದು ಬೆಳಿಗ್ಗೆ ಪರಿವೀಕ್ಷಣೆ ನಡೆಸಿ, ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪೊಲೀಸ್ ಸಿಬ್ಬಂದಿ ತಮ್ಮ ಹಾಗೂ ಕುಟುಂಬದವರ ಆರೋಗ್ಯದ ಕಡೆ ಹೆಚ್ಚು ಗಮನಹರಿಸುವ ಜೊತೆಗೆ ಕರ್ತವ್ಯದಲ್ಲಿದ್ದಾಗ ಸಾರ್ವಜನಿಕರೊಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಕರೆ ನೀಡಿದರು.

ಸಾರ್ವಜನಿಕರ ಆಸ್ತಿ ಪಾಸ್ತಿ ಕಾಪಾಡುವ ಜೊತೆಗೆ ಅಮೂಲ್ಯವಾದ ಜೀವಗಳನ್ನು ರಕ್ಷಣೆ ಮಾಡುವುದು ಸಹ ಆದ್ಯ ಕರ್ತವ್ಯವಾಗಿರುತ್ತದೆ. ಠಾಣೆಗಳಲ್ಲಿ ದಾಖಲಾದ ಪ್ರಕರಣಗಳನ್ನು ಕೂಡಲೇ ವಿಲೇವಾರಿ ಮಾಡಿ, ಸಾರ್ವಜನಿಕರಿಗೆ ಸೂಕ್ತ ನ್ಯಾಯ ದೊರಕಿಸಿಕೊಡಬೇಕೆಂದು ಹಿತ ನುಡಿದರು.

ದಾವಣಗೆರೆ ಶರಣರು, ಸಂತರು, ಮಹನೀಯರುಗಳು ಜನಿಸಿದ ಪುಣ್ಯಭೂಮಿ. ದಾವಣಗೆರೆ ಶಾಂತಿಯ ತೋಟ. ಹಿಂದಿನ ಘಟನೆಗಳು ಮರುಕಳಿಸದೇ, ಶಾಂತಿ, ಸೌಹಾರ್ದಯುತವಾದ ಜನಜೀವನವನ್ನು ನಾವು ಕಾಣಬಹುದಾಗಿದೆ. ಟ್ರಾಫಿಕ್ ಮತ್ತು ಪಾರ್ಕಿಂಗ್ ಸಮಸ್ಯೆಗಳು ಗಣನೀಯವಾಗಿ ಕಡಿಮೆಯಾಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನಗೊಂಡ ತದನಂತರದಲ್ಲಿ ದಾವಣಗೆರೆ ನಗರ ಕೂಡ ಸ್ಮಾರ್ಟ್ ಆಗುತ್ತಿದೆ. ಆದರೆ ಸೈಬರ್ ಕ್ರೈಮ್ ಬಗ್ಗೆ ಪೊಲೀಸರು ಮತ್ತು ಸಾರ್ವಜನಿಕರು ಹೆಚ್ಚು ನಿಗಾವಹಿಸಬೇಕು. ಮೊದಲಿದ್ದ ಅಪರಾಧಗಳ ಸ್ವರೂಪ ಬದಲಾಗುತ್ತಿದ್ದು, ತುಂಬಾ ಎಚ್ಚರಿಕೆಯಿಂದ ಸಾರ್ವಜನಿಕರು ವ್ಯವಹರಿಸಬೇಕಾಗಿದೆ ಎಂದು ತಿಳಿಸಿದರು.

ದಾವಣಗೆರೆ ಜಿಲ್ಲೆಯಲ್ಲಿ ಕೊಲೆ ಪ್ರಕರಣಗಳು ಸಹ ಕಡಿಮೆಯಾಗಿದ್ದು, ನಗರ ಶಾಂತಿಯ ತೋಟವಾಗಿ ಬದಲಾಗುತ್ತಿದೆ. ಬೀಟ್ ವ್ಯವಸ್ಥೆ ಅತ್ಯಂತ ಮಹತ್ವವಾಗಿದ್ದು, ಅದನ್ನು ಇನ್ನಷ್ಟು ಬಲಪಡಿಸುವ ಕಡೆ ಅಧಿಕಾರಿಗಳು ಗಮನಹರಿಸಬೇಕೆಂದು ಸೂಚನೆ ನೀಡಿದರು.

ಶಿಸ್ತು ಮತ್ತು ಗುರಿ ಸಾಧನೆಗೆ ಕವಾಯತು ತುಂಬಾ ಸಹಕಾರಿಯಾಗಲಿದೆ. ಸಂಪ್ರದಾಯವಾಗಿ ನಡೆದುಕೊಂಡು ಬಂದಿರುವ ಕವಾಯತು ಉದ್ದೇಶದ ಬಗ್ಗೆ ಅರಿಯಬೇಕಾಗಿದೆ. ಎಸ್ಪಿ ಉಮಾ ಪ್ರಶಾಂತ್ ಅವರು ಉತ್ತಮವಾಗಿ ಕವಾಯತು ಮುನ್ನಡೆಸಿದ್ದು, ಅವರಿಗೆ ಡಿಎಆರ್ ಪ್ರಕಾಶ್ ಅವರು ಕೂಡ ಸಾಥ್ ನೀಡುವ ಮೂಲಕ ಯಶಸ್ವಿಗೊಳಿಸಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕವಾಯತು ತಂಡಗಳ ನಾಯಕಿಯಾಗಿ ಎಸ್ಪಿ ಉಮಾ ಪ್ರಶಾಂತ್, ಉಪ ನಾಯಕರಾಗಿ ಡಿಎಆರ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್ ಅವರು ಕವಾಯತು ನಡೆಸಿಕೊಟ್ಟರು.

ಡಿಎಆರ್ ಹಾಗೂ ನಾಗರಿಕ ಪೊಲೀಸ್ ಸಿಬ್ಬಂದಿ ಒಳಗೊಂಡಂತೆ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಎಂಟು ತಂಡಗಳು ಕವಾಯತುವಿನಲ್ಲಿ ಭಾಗವಹಿಸಿದ್ದವು.

ಕವಾಯತುವಿನಲ್ಲಿ ಗೌರವ ವಂದನೆ ಸ್ವೀಕರಿಸಿದ ನಂತರ ಜಿಲ್ಲೆಯಲ್ಲಿ ವಿವಿಧ ಕರ್ತವ್ಯಗಳಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ್ದ 13 ಅಧಿಕಾರಿ ಸಿಬ್ಬಂದಿಗೆ ಶ್ಲಾಘನೀಯ ಪತ್ರ ಹಾಗೂ ನಗದು ಬಹುಮಾನ ನೀಡಲಾಯಿತು.

ಈ ಸಂದರ್ಭದಲ್ಲಿ ಐಜಿಪಿ ಡಾ. ತ್ಯಾಗರಾಜನ್, ಅಡಿಷನಲ್ ಎಸ್ಪಿ ರಾಮಗೊಂಡ ಬಸರಗಿ, ಡಿವೈಎಸ್ಪಿ ಬಿ.ಎಸ್. ಬಸವರಾಜ್, ಪಿ.ಬಿ. ಪ್ರಕಾಶ್, ಗ್ರಾಮಾಂತರ ಉಪ ವಿಭಾಗದ ಪ್ರಶಾಂತ್ ಮುನೋಳಿ, ಚನ್ನಗಿರಿ ಉಪವಿಭಾಗದ ಮಲ್ಲೇಶ್ ದೊಡ್ಡಮನಿ, ನಗರ ಉಪ ವಿಭಾಗದ ನಾಗಪ್ಪ ಬಂಕಾಳಿ ಮತ್ತಿತರರು ಭಾಗವಹಿಸಿದ್ದರು.

# ಭ್ರಷ್ಟಾಚಾರ ನಿರ್ಮೂಲನೆ ಹೊಣೆಗಾರಿಕೆ ಕೇವಲ ಇಲಾಖೆ ಕರ್ತವ್ಯವಲ್ಲ

## ‘ಜಾಗೃತಿ ಅರಿವು ಸಪ್ತಾಹ’ ಕಾರ್ಯಕ್ರಮದಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ



ದಾವಣಗೆರೆ,ಅ.11- ಸಾರ್ವಜನಿಕ ಆಡಳಿತದ ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರ ತೊಲಗಿಸಿ ಉತ್ತಮ ಆಡಳಿತಕ್ಕಾಗಿ ಪಾರದರ್ಶಕ ನೀತಿ ರೂಪಿಸಿ, ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ‘ದೇಶದ ಅಭಿವೃದ್ಧಿಗಾಗಿ, ಭ್ರಷ್ಟಾಚಾರ ಮುಕ್ತ ಭಾರತ’ ಎಂಬ ಘೋಷವಾಕ್ಯದೊಂದಿಗೆ ಇಂದು ನಡೆದ ಭ್ರಷ್ಟಾಚಾರ ವಿರುದ್ದದ ಜಾಗೃತಿ ಅರಿವು ಸಪ್ತಾಹ-2023 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು. ಜಾಗೃತಿ ಅರಿವು ಸಪ್ತಾಹ ನಿರಂತರವಾಗಿ ನಡೆಯುವ ಕಾರ್ಯಕ್ರಮವಾಗಬೇಕು. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಹೊಣೆಗಾರಿಕೆ ಕೇವಲ ಇಲಾಖೆಯ ಕರ್ತವ್ಯವಲ್ಲ. ಪ್ರತಿ ನಾಗರಿಕರು ಹಾಗೂ ಪ್ರಜ್ಞಾವಂತ ಸಮಾಜ ಜಾಗರೂಕತೆಯಿಂದ ಬದ್ಧರಾಗಿರಬೇಕು. ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಎಲ್ಲರೂ ಪಾಲುದಾರರಾಗಿ ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ.ವೆಂಕಟೇಶ್.ಎಂ.ವಿ ಅವರು ಮಾತನಾಡಿ, ಭ್ರಷ್ಟಾಚಾರ ಎಂಬುದು ಸಾಮಾಜಿಕ ಪಿಡುಗುಗಳಲ್ಲಿ ಒಂದಾಗಿದೆ. ಇದರಲ್ಲಿ ದೇಶದ ಆರ್ಥಿಕ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಕುಂಠಿತವಾಗುತ್ತದೆ. ಇದಲ್ಲದೆ, ಸಮಾಜದಲ್ಲಿ ಆಗಬೇಕಾಗಿರುವಂತಹ ಕಾರ್ಯಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಬಡತನ ನಿವಾರಣೆಗೂ ಅಡಚಣೆ ಉಂಟಾಗುತ್ತಿದ್ದು, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾನೂನು ನಿಯಮಗಳಿಗೆ ಒಳಪಟ್ಟು ಕಾರ್ಯ ನಿರ್ವಹಿಸಬೇಕು ಎಂದರು.

ಭ್ರಷ್ಟಾಚಾರ ಎಂದರೆ ಕೇವಲ ಹಣವನ್ನು ಪಡೆಯುವುದು ಅಷ್ಟೇ ಅಲ್ಲದೇ, ಕಚೇರಿಯಲ್ಲಿನ ಯಾವುದೇ ಒಂದು ಕಡತವನ್ನು ಮಂಜೂರಾತಿ ಮಾಡದೇ ಕಾರ್ಯ ವಿಳಂಬ ಮಾಡಿದರೂ ಸಹ ಅದು ಭ್ರಷ್ಟಾಚಾರವೇ, ಇದನ್ನು ಅರ್ಥೈಸಿಕೊಂಡು ಪ್ರಜಾಪ್ರಭುತ್ವದ ಆತ್ಮವಾಗಿರುವ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿದಾಗ ಮಾತ್ರ ಉತ್ತಮ ಸಮಾಜ ಕಟ್ಟಲು ಸಾಧ್ಯ ಎಂದರು.

ಸರ್ಕಾರವು ಸಕಾಲ ಸೇವೆಯನ್ನು ಜಾರಿಗೆ ತಂದು, ಸಾರ್ವಜನಿಕರು ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸಹಕಾರಿಯಾಗಿದ್ದು, 450ಕ್ಕೂ ಹೆಚ್ಚು ಸೇವೆಗಳನ್ನು ಸಕಾಲದಲ್ಲಿ ಒದಗಿಸಲಾಗುತ್ತಿದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಭ್ರಷ್ಟಾಚಾರ ತಡೆ ಜಾಗೃತಿ ಸಪ್ತಾಹದ ಪ್ರತಿಜ್ಞಾ ವಿಧಿ ಬೋಧಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ ಬಿ. ಇಟ್ನಾಳ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪುರೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಎಲ್.ಹೆಚ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹಿಂದೂ ಮಹಾ ಗಣಪತಿ ಮೂರ್ತಿ ವಿಸರ್ಜನೆ: ನಾಡಿದ್ದು ಬಸ್‌ಗಳ ಮಾರ್ಗ ಬದಲಾವಣೆ

ದಾವಣಗೆರೆ, ಅ.11 - ನಗರದ ಹೈಸ್ಕೂಲ್ ಮೈದಾನದಲ್ಲಿ ಪ್ರತಿಷ್ಠಾಪನೆ ಮಾಡಿರುವ ಗಣೇಶ ಮೂರ್ತಿಯ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಹೆಚ್ಚಿನ ಜನ ಸೇರುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗುವ ಕಾರಣ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಇದೇ ದಿನಾಂಕ 14ರ ಶನಿವಾರ ಬೆಳಗ್ಗೆ 6 ರಿಂದ ರಾತ್ರಿ 10 ರವರೆಗೆ ಮಾತ್ರ ದಾವಣಗೆರೆ ನಗರದ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್ ನಿಲ್ದಾಣಗಳಿಗೆ ಬರುವ ಬಸ್‌ಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ನಿಲುಗಡೆ ಮಾಡಿಕೊಂಡು, ಅಲ್ಲಿಂದಲೇ ವಾಪಸ್ ತೆರಳಲು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

ಮೆರವಣಿಗೆಯು ಎ.ವಿ.ಕೆ ರಸ್ತೆ, ಚೇತನಾ ಹೋಟೆಲ್ ಎಡಭಾಗದಿಂದ ಅಂಬೇಡ್ಕರ್ ವೃತ್ತ, (ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್), ಜಯದೇವ ಸರ್ಕಲ್, ಲಾಯರ್ ರಸ್ತೆ, ಪಿ.ಬಿ .ರಸ್ತೆ, ಗಾಂಧಿ ವೃತ್ತ, ಹಳೇ ಬಸ್ ನಿಲ್ದಾಣ, ಅರಸು ಕ್ರಾಸ್, ಮಹಾನಗರ ಪಾಲಿಕೆ, ರಾಣಿ ಚೆನ್ನಮ್ಮ ವೃತ್ತ, ಈದ್ಗಾ ಮೈದಾನ (ಖಬರಸ್ಥಾನ್), ಮದೀನ ಮಸೀದಿ, ಕೋರ್ಟ್ ವೃತ್ತದ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ಬಂದು ಮೆರವಣಿಗೆಯನ್ನು ಮುಕ್ತಾಯ ಮಾಡಿ ನಂತರ ಗಣೇಶ ಮೂರ್ತಿಯನ್ನು ಬಾತಿ ಕೆರೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ.

**ಮಾರ್ಗ ಬದಲಾವಣೆ ವಿವರ:** ಚನ್ನಗಿರಿ ರಸ್ತೆ ಕಡೆಯಿಂದ ಬರುವ ಬಸ್‌ಗಳು - ಹದಡಿ ರಸ್ತೆಯಲ್ಲಿರುವ ಶ್ರೀ ಮಾಗನೂರು ಬಸಪ್ಪ ಮೈದಾನದಲ್ಲಿ ನಿಲುಗಡೆ ಮಾಡಿಕೊಂಡು ನಿರ್ಗಮಿಸುವುದು. ಜಗಳೂರು ಕಡೆಯಿಂದ ಬರುವ ಬಸ್‌ಗಳು- ಕೆ.ಆರ್.ರಸ್ತೆ ಗಣೇಶಗುಡಿ ಪಕ್ಕದಲ್ಲಿರುವ ಜಗಳೂರು ಬಸ್ ನಿಲ್ದಾಣದಲ್ಲಿ ನಿಲುಗಡೆ ಮಾಡಿಕೊಂಡು ನಂತರ ಆರ್‌ಎಂಸಿ ಯಾರ್ಡ್ ರಸ್ತೆ ಮೂಲಕ ಫ್ಲೈ ಓವರ್ ಹತ್ತಿರ ಬಂದು ವಾಪಾಸ್ ಅದೇ ಮಾರ್ಗವಾಗಿ ಹೋಗುವುದು. ಚಿತ್ರದುರ್ಗ ಮತ್ತು ಸಂತೇಬೆನ್ನೂರು-ಬೀರೂರು ಸಮ್ಮಸಗಿ ರಸ್ತೆಯಿಂದ ಬರುವ ಬಸ್‌ಗಳನ್ನು ದಾವಣಗೆರೆ ನಗರದ ನಿರ್ಮಾಣ ಹಂತದಲ್ಲಿರುವ ಹೊಸ ಕೆಎಸ್‌ಆರ್‌ಟಿಬಸ್ ನಿಲ್ದಾಣಕ್ಕೆ ಬಂದು ವಾಪಾಸ್ ಬಾಡ ಕ್ರಾಸ್ ನ ರಸ್ತೆ ಮೂಲಕ ಹರಿಹರ, ಹಾವೇರಿ ಕಡೆಗೆ ಹೋಗುವುದು, ಹರಿಹರ ಮತ್ತು ಶಾಮನೂರು ಕಡೆಯಿಂದ ಬರುವ ವಾಹನಗಳನ್ನು ದಾವಣಗೆರೆ ನಗರದ ಎಸಿಬಿ ಕಛೇರಿ ಎದುರುಗಡೆ ರಿಂಗ್ ರಸ್ತೆಯಲ್ಲಿರುವ ಎರಡು ಖಾಲಿ ಜಾಗದಲ್ಲಿ ನಿಲುಗಡೆ ಮಾಡಿಕೊಂಡು ನಿರ್ಗಮಿಸಬೇಕೆಂದು ತಿಳಿಸಲಾಗಿದೆ.

## ಲೋಕ ಸಭಾ ಚುನಾವಣೆ : ಚಿತ್ರದುರ್ಗಕ್ಕೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ಹೆಚ್. ದುಗ್ಗಪ್ಪ ಮನವಿ



ದಾವಣಗೆರ, ಅ. 11 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಿತ್ರದುರ್ಗ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ತಮ್ಮಗಳ ಸೇವೆ ಮಾಡಲು ಅವಕಾಶ ನೀಡುವಂತೆ ಕಾಂಗ್ರೆಸ್ ವರಿಷ್ಠರಿಗೆ ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಮನವಿ ಮಾಡಿದ್ದಾರೆ.

ಕಳೆದ 40 ವರ್ಷಗಳಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಸೇವೆ ಸಲ್ಲಿಸುತ್ತಿರುವ ತಮಗೆ ಪಕ್ಷದಲ್ಲಿ ಇಲ್ಲಿಯವರೆಗೂ ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ, ವಿಧಾನಪರಿಷತ್ ಸದಸ್ಯ ಸ್ಥಾನ ಯಾವುದನ್ನೂ ನೀಡದೇ ಮುಂದೂಡುತ್ತಲೇ ಬರುತ್ತಿದ್ದಾರೆ. ವಿಧಾನಸಭಾ ಚುನಾವಣೆಯಲ್ಲೂ ಮಾಯಕೊಂಡ ಕ್ಷೇತ್ರದ ಆಕಾಂಕ್ಷಿಯಾಗಿದ್ದ ನನಗೆ ಟಿಕೇಟ್ ಕೈತಪ್ಪಿತು. ಆದ್ದರಿಂದ ಈ ಲೋಕಸಭಾ ಚುನಾವಣೆಗೆ ಟಿಕೆಟ್ ನೀಡುವುದಾಗಿ ಪಕ್ಷದ ಹೈಕಮಾಂಡ್ ಭರವಸೆ ನೀಡಿದ್ದು, ಟಿಕೆಟ್ ಸಿಕ್ಕರೆ ನನಗೆ ಜನಸೇವೆ ಮಾಡಲು ಅವಕಾಶ ಸಿಗಲಿದೆ ಎಂದಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ದಿ. ಕೆ.ಹೆಚ್. ರಂಗನಾಥ ಒಬ್ಬರನ್ನು ಬಿಟ್ಟರೆ ಯಾರೂ ಸಹ ಸ್ವಂತ ಜಿಲ್ಲೆಯವರು ಆಯ್ಕೆಯಾದ ಇತಿಹಾಸವೇ ಇಲ್ಲ. ಇಲ್ಲಿ ಹೊರ ಜಿಲ್ಲೆಯಿಂದ ಬಂದವರೇ ಸಂಸದರಾಗುತ್ತಿದ್ದಾರೆ. ಬಿಜೆಪಿ ಪಕ್ಷದಿಂದ ಬೆಂಗಳೂರಿನ ನಾರಾಯಣ ಸ್ವಾಮಿಯವರು, ಇಂತಹ ಅನೇಕರು ಹೊರ ಜಿಲ್ಲೆಯಿಂದ ಈ ಜಿಲ್ಲೆಯಲ್ಲಿ ಸ್ಪರ್ಧಿಸಿ ಗೆಲ್ಲುತ್ತಾ ಬರುತ್ತಿದ್ದಾರೆ. ಗೆದ್ದಿರುವ ಇತಿಹಾಸ ಮುಂದುವರೆಯುತ್ತಲೇ ಇದೆ. ಆದ್ದರಿಂದ ಮಾತ್ರ ಜಿಲ್ಲೆಯ ಮಗನಾದ ನಾನು ಈ ಬಾರಿ ಲೋಕಸಭಾ ಮೀಸಲು ಚುನಾವಣೆಗೆ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿರುವುದರಿಂದ ಪಕ್ಷ ತಮ್ಮನ್ನು ಪರಿಗಣಿಸಬೇಕೆಂದು ಮನವಿ ಮಾಡಿದ್ದಾರೆ.

## ಕೊಪ್ಪದಲ್ಲಿ ನಾಳೆ ಗ್ರಾಮ ವಾಸ್ತವ್ಯ : ವಿನಯ್ ಕುಮಾರ್



ದಾವಣಗೆರೆ, ಅ.11- ಹರಿಹರ ವಿಧಾನಸಭಾ ಕ್ಷೇತ್ರದ ಗಡಿ ಗ್ರಾಮ ಕೊಪ್ಪದಲ್ಲಿ ನಾಳೆ ಗ್ರಾಮ ವಾಸ್ತವ್ಯ ಹಮ್ಮಿಕೊಂಡಿರುವುದಾಗಿ ದಾವಣಗೆರೆ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 12ರ ಗುರುವಾರ ಸಂಜೆ 7 ಗಂಟೆಗೆ ಗ್ರಾಮಕ್ಕೆ ತೆರಳಿ, ಅಲ್ಲಿಯೇ ವಾಸ್ತವ್ಯ ಮಾಡಿ, ಮರುದಿನ ಗ್ರಾಮದಲ್ಲಿ ಶಾಲಾ ಮಕ್ಕಳು, ರೈತರು ಹಾಗೂ ಗ್ರಾಮಸ್ಥರೊಂದಿಗೆ ಸಂವಾದ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಹಾಲಿವಾಣ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಸದಸ್ಯರ ಸಹಕಾರ ಇದ್ದು, ಅವರೂ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಯೋಜನೆಗಳಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಪಿಎಂ ಆವಾಸ್ ಯೋಜನೆಗಳು ಗ್ರಾಮೀಣ ಜನರಿಗೆ ಎಷ್ಟರ ಮಟ್ಟಿಗೆ ತಲುಪಿವೆ ಎಂಬುದನ್ನು ಅರ್ಥ ಮಾಡಕೊಳ್ಳಲು ಗ್ರಾಮ ವಾಸ್ತವ್ಯ ಹಮ್ಮಿಕೊಳ್ಳಲಾಗಿದೆ ಎಂದರು. ಸಂಸದನಾಗಬೇಕಾದವನಿಗೆ ಗ್ರಾಮೀಣರ ಸಮಸ್ಯೆಗಳ ಅರಿವಿರಬೇಕು. ಈ ಹಿನ್ನೆಲೆಯಲ್ಲಿ ಈ ಯೋಜನೆ ರೂಪಿಸಲಾಗಿದ್ದು, ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ವಿಜನ್ ಡಾಕ್ಯುಮೆಂಟ್ ರಿಲೀಸ್ ಮಾಡುವ ಚಿಂತನೆ ಇದೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದ ಎರಡು ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡಿ ಜನರ ಕಷ್ಟಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

## ರಾಜ್ಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆ

ದಾವಣಗೆರೆ, ಅ.11- ದಸರಾ ಸಿ.ಎಂ. ಕಪ್ ಕ್ರೀಡಾ ಕೂಟ–2023 ರ ಅಂಗವಾಗಿ ರಾಜ್ಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯನ್ನು ಇದೇ ದಿನಾಂಕ 14 ರ ಶನಿವಾರ ಮೈಸೂರಿನಲ್ಲಿ ಏರ್ಪಡಿಸಲಾಗಿದೆ.

ದಾವಣಗೆರೆ ಜಿಲ್ಲೆಯಿಂದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಮ್ಮ ಹೆಸರನ್ನು ನಾಳೆ ದಿನಾಂಕ 12ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಶ್ರೀಮತಿ ಅಲ್ಕಾ ಪಡತಾರೆ ದೂ.9448234883, ಅನಿತಾ ನಿಂಬರಗಿ ದೂ. 9449959064ಗೆ ಸಂಪರ್ಕಿಸ ಬಹುದೆಂದು ಯುವ ಸಬಲೀ ಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀ ಬಾಯಿ ತಿಳಿಸಿದ್ದಾರೆ.

## ಗೀತ ಗಾಯನ ತರಬೇತಿ

ದಾವಣಗೆರೆ, ಅ. 11- ಕರ್ನಾಟಕದ ನಾಡಹಬ್ಬ ದಸರಾ ಪ್ರಯುಕ್ತ ಸುಶ್ರಾವ್ಯ ಸಂಗೀತ ವಿದ್ಯಾಲಯದ ವತಿಯಿಂದ ಝೇಂಕಾರ-3 ‘ನವರಾತ್ರಿ’ ಗೀತ ಗಾಯನ ತರಬೇತಿ ಶಿಬಿರವನ್ನು ಇದೇ ದಿನಾಂಕ 15ರ ಭಾನುವಾರ ಬೆಳಿಗ್ಗೆ 11 ರಿಂದ 1.30ರವರೆಗೆ ಹಮ್ಮಿಕೊಳ್ಳಲಾಗಿದೆ. ಸುಶ್ರಾವ್ಯ ಸಂಗೀತ ವಿದ್ಯಾಲಯದ ನಿರ್ದೇಶಕರಾದ ಶ್ರೀಮತಿ ಯಶಾ ದಿನೇಶ್ ಅವರ ಗಾಯನ ತರಬೇತಿಯು ನಮನ, 2000/83, 13ನೇ ಕ್ರಾಸ್, ತರಳಬಾಳು ಬಡಾವಣೆಯಲ್ಲಿ ನಡೆಯಲಿದ್ದು, ಶಿಬಿರದಲ್ಲಿ 5 ಭಕ್ತಿಗೀತೆಗಳ ಗಾಯನ ತರಬೇತಿ ನೀಡಲಾಗುವುದು. ವಿವರಕ್ಕೆ 94498 08886 ಈ ಸಂಖ್ಯೆಗೆ ಕೇವಲ ಮೆಸೇಜ್ ಮಾಡಬಹುದಾಗಿದೆ.

## ಪಠಾಣ್‌ಕೋಟ್ ದಾಳಿ ರೂವಾರಿ ಲತೀಫ್ ಹತ



ನವದೆಹಲಿ, ಅ. 11 – ಪಠಾಣ್‌ಕೋಟ್‌ನ ಭಾರತೀಯ ವಾಯುಪಡೆಯ ನೆಲೆಯ ಮೇಲೆ ನಡೆದ ದಾಳಿಯ ರೂವಾರಿಯಾಗಿದ್ದ ಜೈಶ್ - ಎ – ಮೊಹಮ್ಮದ್ ಉಗ್ರವಾದಿ ಸಂಘಟನೆಯ ಶಹೀದ್ ಲತೀಫ್ ಪಾಕಿಸ್ತಾನದ ಸಿಯಾಲ್ಕೋಟ್ ಜಿಲ್ಲೆಯ ಮಸೀದಿಯಲ್ಲಿ ಗುಂಡೇಟಿಗೆ ಸಿಲುಕಿ ಹತನಾಗಿದ್ದಾನೆ. ಲತೀಫ್ ಹಾಗೂ ಆತನ ಸಹೋದರ ಸೇರಿದಂತೆ ಮೂವರು ದಸ್ಕ ನಗರದ ನೂರ್ ಮದಿನಾ ಮಸೀದಿಯಿಂದ ಹೊರ ಬರುವಾಗ ಗುಂಡೇಟಿಗೆ ಸಿಲುಕಿದ್ದಾರೆ. ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

## ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಶಿವಮೂರ್ತಿ ಸ್ವಾಮಿಯವರಿಗೆ ಶ್ರದ್ಧಾಂಜಲಿ



ದಾವಣಗೆರೆ, ಅ. 11 - ಕಳೆದ ವಾರ ನಿಧನರಾದ ಬಾಡಾ ಕ್ರಾಸ್ ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಮರ್ಪಿಸುವ ಕಾರ್ಯಕ್ರಮವು ಡಾ. ಪುಟ್ಟರಾಜ ಸೇವಾ ಸಮಿತಿ ಜಿಲ್ಲಾ ಘಟಕ ಮತ್ತು ಮಹಿಳಾ ಘಟಕದ ಆಶ್ರಯದಲ್ಲಿ ಶ್ರೀಗಂಧ ರೆಸಿಡೆನ್ಸಿ ಹಾಲ್‌ನಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಗದಗ - ದಾವಣಗೆರೆ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಶ್ರೀ ಕಲ್ಲಯಜ್ಜನವರು ಮಾತನಾಡಿ, ಎ. ಹೆಚ್. ಶಿವಮೂರ್ತಿಸ್ವಾಮಿ ಅವರ ಆದರ್ಶ ಜೀವನ ಹಾಗೂ ನಡೆದು ಬಂದ ದಾರಿಯನ್ನು ಮಾರ್ಮಿಕವಾಗಿ ವಿವರಿಸಿದರು.

ಸಮಿತಿಯ ರಾಜ್ಯಾಧ್ಯಕ್ಷ ಚನ್ನವೀರಸ್ವಾಮಿ ಹಿರೇಮಠ, ರಾಜ್ಯ ಸಂಚಾಲಕ ಶಿವಬಸಯ್ಯ ಚರಂತಿಮಠ, ಜಿಲ್ಲಾ ಉಪಾಧ್ಯಕ್ಷ ರೇವಣಸಿದ್ದಪ್ಪ, ಜಿಲ್ಲಾ ಕಾರ್ಯದರ್ಶಿ ವೀರಶೈವ ಸೊಸೈಟಿಯ ಅಧ್ಯಕ್ಷ ಎ. ಎಸ್. ಮೃತ್ಯುಂಜಯ, ಪ್ರಚನಕಾರ ಮಹಾಂತೇಶ ಶಾಸ್ತ್ರಿ ಮತ್ತಿತರರು ಶಿವಮೂರ್ತಿಸ್ವಾಮಿ ಅವರ ಸೇವೆಯನ್ನು ಕೊಂಡಾಡಿದರು.

ಶಿವಮೂರ್ತಿ ಸ್ವಾಮಿ ಅವರ ಪುತ್ರಿಯೂ ಆಗಿರುವ ಬಿಐಇಟಿ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಸುಗ್ಗಾದೇವಿ ಉಪಸ್ಥಿತರಿದ್ದರು. ಸಮಿತಿಯ ಜಿಲ್ಲಾ ಅಧ್ಯಕ್ಷ ಪಿ. ಬಿ. ವಿನಾಯಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಸೌಮ್ಯ ಸತೀಶ್, ಉಪಾಧ್ಯಕ್ಷರಾದ ವನಜಾ ಮಹಲಿಂಗಯ್ಯ, ಕಾರ್ಯದರ್ಶಿ ಮಮತಾ ನಾಗರಾಜ್, ಪದಾಧಿಕಾರಿಗಳಾದ ಮಧುಮತಿ ಗಿರೀಶ್, ಪುಷ್ಪ ಎನ್ ಎಚ್.ಶಾಂತಾ ಶಿವಶಂಕರ್, ದಾಕ್ಷಾಯಣಿ, ಶಾನ್ವಿ, ರಾಜಶ್ರೀ ರಮೇಶ್, ಪುಷ್ಪಲತಾ, ಮಂಜುಳಾ, ಅನುಷಾ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮನೆಯಿಂದ ಕೆಲಸ ಅಂತ್ಯಗೊಳಿಸಿದ ಟಿ.ಸಿ.ಎಸ್.

ಮುಂಬೈ, ಅ. 11 – ಐ.ಟಿ. ಸೇವಾ ಕಂಪನಿಯಾದ ಟಿ.ಸಿ. ಎಸ್. ಮನೆಯಿಂದ ಕೆಲಸ ಮಾಡುವ ಪದ್ಧತಿಯನ್ನು ಅಂತ್ಯಗೊಳಿಸಿದೆ. ತನ್ನ 6.14 ಲಕ್ಷ ಉದ್ಯೋಗಿಗಳು ಕಚೇರಿಗೆ ಬಂದು ಕೆಲಸ ಮಾಡಬೇಕೆಂದು ತಿಳಿಸಿದೆ. ಕೊರೊನಾ ಕಾಲದಿಂದ ಮನೆಯಲ್ಲಿ ಕೆಲಸ ಮಾಡುವ ಪದ್ಧತಿ ಆರಂಭಿಸಲಾಗಿತ್ತು. ಕಚೇರಿಗೆ ಬಂದು ಕೆಲಸ ಮಾಡುವ ಬಗ್ಗೆ ಘೋಷಣೆ ಮಾಡಿರುವ ಪ್ರಮುಖ ಐ.ಟಿ. ಕಂಪನಿ ಟಿ.ಸಿ.ಎಸ್. ಆಗಿದೆ. ಜೊತೆಯಾಗಿ ಕೆಲಸ ಮಾಡುವುದರಿಂದ ಉತ್ಪಾದಕತೆ ಹೆಚ್ಚಾಗುತ್ತದೆ ಹಾಗೂ ಮೌಲ್ಯ ವ್ಯವಸ್ಥೆ ಬೆಳೆಯುತ್ತದೆ ಎಂದು ಟಿ.ಸಿ.ಎಸ್. ಮಾನವ ಸಂಪನ್ಮೂಲ ಮುಖ್ಯ ಅಧಿಕಾರಿ ಮಿಲಿಂದ್ ಲಕ್ಕಡ್ ಹೇಳಿದ್ದಾರೆ.

## 14 ರಂದು ಮದ್ಯ ಮಾರಾಟ ನಿಷೇಧ

ದಾವಣಗೆರೆ, ಅ.11- ನಗರದ ಹಿಂದೂ ಮಹಾಗಣಪತಿ ವಿಸರ್ಜನೆ ಮೆರವಣಿಗೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇದೇ ದಿನಾಂಕ 14 ರ ಶನಿವಾರ ಬೆಳಗ್ಗೆ 6 ರಿಂದ ಮಧ್ಯ ರಾತ್ರಿ 12 ರವರೆಗೆ ಮದ್ಯ ಮಾರಾಟ ಮತ್ತು ಸರಬರಾಜನ್ನು ಜಿಲ್ಲಾ ದಂಡಾಧಿಕಾರಿ ಡಾ. ವೆಂಕಟೇಶ್ ಎಂ.ವಿ ನಿಷೇಧಿಸಿ, ಆದೇಶಿಸಿದ್ದಾರೆ.

## ಇಸ್ರೇಲ್‌ನಿಂದ ಭಾರತೀಯರನ್ನು ಕರೆ ತರಲು ‘ಆಪರೇಷನ್ ವಿಜಯ್’

ನವದೆಹಲಿ, ಅ. 11 – ದೇಶಕ್ಕೆ ವಾಪಸ್ಸಾಗಲು ಬಯಸುವ ಇಸ್ರೇಲ್‌ನಲ್ಲಿರುವ ಭಾರತೀಯರನ್ನು ಕರೆತರಲು ಕೇಂದ್ರ ಸರ್ಕಾರ ‘ಆಪರೇಷನ್ ವಿಜಯ್’ ಎಂಬ ಹೆಸರಿನ ಕಾರ್ಯಾಚರಣೆ ಆರಂಭಿಸಿದೆ.

ಹಮಾಸ್ ಉಗ್ರರು ಹಾಗೂ ಇಸ್ರೇಲ್ ನಡುವಿನ ಸಂಘರ್ಷ ಐದನೇ ದಿನಕ್ಕೆ ಕಾಲಿಟ್ಟಿರುವ ಸಂದರ್ಭದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಘೋಷಣೆ ಮಾಡಿದ್ದಾರೆ.

ವಿಶೇಷ ವಿಮಾನ ಸೇರಿದಂತೆ ಮತ್ತಿತರೆ ಮಾರ್ಗಗಳ ಮೂಲಕ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆ ತರಲಾಗುವುದು ಎಂದವರು ಹೇಳಿದ್ದಾರೆ.

## ಕನಕ ಜಯಂತಿ : ನಗರದಲ್ಲಿ ಇಂದು ಸಭೆ

ನವೆಂಬರ್‌ನಲ್ಲಿ ನಡೆಯಲಿರುವ ದಾಸ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ಇಂದು ಸಂಜೆ 5 ಗಂಟೆಗೆ ಪಿ.ಬಿ.ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಕುರುಬ ಸಮಾಜದ ಹಿರಿಯ ಮುಖಂಡ ಹೆಚ್.ಜಿ.ಸಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

## 16 ರಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಅ.11- ಇದೇ ದಿನಾಂಕ 16 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ನಗರದ ಮುನ್ಸಿಪಲ್ ಗ್ರೌಂಡ್ ಹತ್ತಿರ, ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ಉದ್ಯೋಗ ಮೇಳಕ್ಕೆ ವಿವಿಧ ಜಿಲ್ಲೆ ಹಾಗೂ ರಾಜ್ಯಮಟ್ಟದಿಂದ 100-150 ಉದ್ಯೋಗದಾತರು ಭಾಗವಹಿಸಲಿದ್ದು, ಜಿಲ್ಲೆಯ ನಿರುದ್ಯೋಗಿ ಯುವಕ, ಯುವತಿಯರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದೆಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

## ಭಾರತ – ಪಾಕ್ ಕ್ರಿಕೆಟ್ ಪಂದ್ಯಕ್ಕೆ ಬೆದರಿಕೆ ಹಾಕಿದವನ ಬಂಧನ

ಅಹಮದಾಬಾದ್, ಅ. 11 – ಅಕ್ಟೋಬರ್ 14 ರಂದು ಭಾರತ ಹಾಗೂ ಪಾಕಿಸ್ತಾನದ ನಡುವೆ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ನಡೆಯುವಾಗ ಸ್ಫೋಟ ನಡೆಸುವ ಬೆದರಿಕೆ ಹಾಕಿದ್ದ ರೌಡಿ ಶೀಟರ್ ಓರ್ವನನ್ನು ಅಹಮದಾ ಬಾದ್ ಅಪರಾಧ ದಳ ಬಂಧಿಸಿದೆ. ಕರಣ್ ಮಾವಿ ಎಂಬಾತನನ್ನು ರಾಜ್‌ಕೋಟ್‌ನಲ್ಲಿ ಬಂಧಿಸಲಾಗಿದೆ. ಈತ ಇ-ಮೇಲ್ ಮೂಲಕ ಬಿ.ಸಿ.ಸಿ.ಐ.ಗೆ ಬೆದರಿಕೆ ಪತ್ರ ಕಳಿಸಿದ್ದ. ಮಾವಿ ಮಧ್ಯ ಪ್ರದೇಶದ ಧರ್ ಜಿಲ್ಲೆಯವನು.


## ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ಪಿ.ಬಿ. ರಸ್ತೆ, ದಾವಣಗೆರೆ.

**ನಿಯಮ 8(1) ಪರಿಶಿಷ್ಟ 4**

**-: ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸು :-**

**(ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ)**

ಸೆಕ್ಯೂರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳ ಸಹಿದಾರರು, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಮತ್ತು 9 ಓದಿಕೊಂಡಂತೆ, ಕಲಂ 13(12) ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 05.07.2023ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಾಗಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮ 8 ಮತ್ತು 9ನ್ನು ಓದಿಕೊಂಡಂತೆ, ಸದರಿ ಆಕ್ಟ್ ಪ್ರಕರಣ 13(4)ರನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿನಾಂಕ : 04.09.2023ರಂದು ಈ ಕೆಳಕಂಡ ಸ್ವತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸೊತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸೊತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ :**

1. **ಶ್ರೀ ಎಸ್.ವಿ. ರುದ್ರಮುನಿ ಬಿನ್ ಎಸ್. ವೀರಣ್ಣ**, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
2. ಸಾಲದ ಖಾತೆ ಸಂಖ್ಯೆ : ಅಡವು ಸಾಲ (ಎಂ.ಎಲ್.) ನಂ. 257 ಬರಬೇಕಾದ ಸಾಲದ ಬಾಕಿ ಅಸಲು ರೂ. 3,46,876=00+ಬಡ್ಡಿ 01.09.2023 ರಿಂದ + ಇತರೆ ಖರ್ಚು

**ಜಾಮೀನುದಾರರ ಹೆಸರು ಮತ್ತು ವಿಳಾಸ :**

1. ಶ್ರೀ ಎಸ್. ವೀರಣ್ಣ ಬಿನ್ ರುದ್ರಪ್ಪ, 787/1, ಹೊಂಡದ ರಸ್ತೆ, ದಾವಣಗೆರೆ.
2. ಶ್ರೀ ಜೆ. ವಿಜಯಕುಮಾರ್ ಬಿನ್ ಉಮಣ್ಣ, ಎಸ್.ಎಸ್. ಬಡಾವಣೆ, ಬಿ ಬ್ಲಾಕ್, ದಾವಣಗೆರೆ.

**ಬ್ಯಾಂಕಿಗೆ ಆಧಾರವಾದ ಸ್ಥಿರಾಸ್ತಿಗಳ ವಿವರ :**


ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟು ದಾವಣಗೆರೆ 4ನೇ ವಾರ್ಡು, 6ನೇ ಡಿವಿಜನ್, ಬಂಬೂ ಬಜಾರ್ ರಸ್ತೆ, ಆರ್.ಎಂ.ಸಿ. ಲಿಂಕ್ ರೋಡ್‌ನಲ್ಲಿ ಬರತಕ್ಕ ನಿವೇಶನ ನಂ. 110, ಮತ್ತು ಹಳೇ ಡೋರ್ ನಂ. 109/110, ಚಾಲ್ತಿ ಡೋರ್ ನಂ. 109/110 ಎ ವುಳ್ಳ ಅಳತೆ 30x20 ಅಡಿಗಳು ಹಾಗೂ ನಿವೇಶನ ನಂ. 110/ಬಿ ಹಳೆ ಡೋರ್ ನಂ. 109/110 ಬಿ ಇದರ ಅಳತೆ 30x20 ಅಡಿಗಳು, ಇವುಗಳ ಒಟ್ಟು ಅಳತೆ 30x40 ಅಡಿಗಳು. ಇದರ ಚೆಕ್ಕುಬಂದಿ ಈ ಕೆಳಗಿನಂತಿದೆ.

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 110 ಉಳಿದ ಸೊತ್ತು, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : ರಸ್ತೆ.

ದಿನಾಂಕ :11.10.2023
ಸ್ಥಳ : ದಾವಣಗೆರೆ

**ಸಹಿ/- (ಎನ್. ತುಳಸಿನಾಥ),**
ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು,
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

## ನಗರದಲ್ಲಿ ಇಂದು ಶ್ರೀ ಜಯದೇವ ಜಗದ್ಗುರುಗಳ ರಥೋತ್ಸವ



ಚಿತ್ರದುರ್ಗ ಬೃಹನ್ಮಠದ ಹಿರಿಯ ಜಗದ್ಗುರು ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ 67ನೇ ವರ್ಷದ ಸ್ಮರಣೋತ್ಸವ-ರಥೋತ್ಸವ ಇಂದು ಬೆಳಿಗ್ಗೆ 11 ಗಂಟೆಗೆ ಬಸವ ಕೇಂದ್ರ-ಶ್ರೀ ಶಿವಯೋಗಾಶ್ರಮದಲ್ಲಿ ನಡೆಯಲಿದೆ.

ಚಿತ್ರದುರ್ಗ ಬೃಹನ್ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿ, ಅಥಣಿ ಶ್ರೀ ಗಚ್ಚಿನ ಮಠದ ಶ್ರೀ ಶಿವ ಬಸವ ಮಹಾಸ್ವಾಮೀಜಿ, ಗುರುಮಠಕಲ್‌ನ ಶ್ರೀ ಖಾಸಾ ಮಠದ ಶ್ರೀ ಶಾಂತ ವೀರ ಗುರು ಮುರುಘರಾಜೇಂದ್ರ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು.

ಇದೇ ಸಂದರ್ಭದಲ್ಲಿ ಚನ್ನಗಿರಿಯ ಪ್ರವಚನಕಾರರಾದ ಮಹಾಂತೇಶ ಶಾಸ್ತ್ರಿಗಳಿಂದ ಶ್ರೀ ಜಯದೇವ ಲೀಲೆ ಪ್ರವಚನ ನಡೆಯಲಿದ್ದು, ದಾವಣಗೆರೆ ವಿರಕ್ತಮಠದ ಶ್ರೀ ಬಸವ ಕಲಾ ಲೋಕದಿಂದ ವಚನ ಸಂಗೀತ ಕಾರ್ಯಕ್ರಮ ಏರ್ಪಾಡಾಗಿದೆ.

ಈ ಕಾರ್ಯಕ್ರಮದ ನಂತರ ಸಂಜೆ 5 ಗಂಟೆಗೆ ಲಿಂ. ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ರಥೋತ್ಸವ ಮತ್ತು ವಚನ ಗ್ರಂಥ ಮೆರವಣಿಗೆ ಆಯೋಜನೆಗೊಂಡಿದೆ. ಶ್ರೀ ಜಯದೇವ ಜಗದ್ಗುರುಗಳವರ ಭಾವಚಿತ್ರದೊಂದಿಗೆ ಲಿಂಗಾಯಿತ ಧರ್ಮಗ್ರಂಥವಾದ ಬಸವಾದಿ ಶರಣರ ವಚನ ಸಾಹಿತ್ಯ ಉತ್ಸವವು ಜರುಗಲಿದೆ.

# ನಗರದೇವತೆ ದುಗ್ಗಮ್ಮನ ದೇವಸ್ಥಾನದಲ್ಲಿ 15ರಿಂದ ದಸರಾ ಉತ್ಸವ

### 15ರ ಮುಂಜಾನೆ ಎಸ್ಸೆಸ್-ಎಸ್ಸೆಸ್ಸೆಂ ಕುಟುಂಬದಿಂದ ನಾಡಹಬ್ಬಕ್ಕೆ ಚಾಲನೆ ; ಉತ್ಸವದ ಕೊನೆ ದಿನದಂದು ಉಚಿತ ಸಾಮೂಹಿಕ ವಿವಾಹ

ದಾವಣಗೆರೆ, ಅ. 11- ನಗರದ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಇದೇ ದಿನಾಂಕ 15 ರಿಂದ ದಿನಾಂಕ 24ರವರೆಗೆ 9 ದಿನಗಳ ಕಾಲ ನವರಾತ್ರಿ ಮಹೋತ್ಸವ ಆಯೋಜನೆಗೊಂಡಿದೆ.

ದಿ. 15ರ ಭಾನುವಾರ ಬೆಳಿಗ್ಗೆ 6.30ಕ್ಕೆ ದೇವಸ್ಥಾನದ ಪುರೋಹಿತರಾದ ನಾಗರಾಜ್ ಜೋಯಿಸ್ ಅವರ ಸಮ್ಮುಖದಲ್ಲಿ ಹಿರಿಯ ಶಾಸಕರೂ ಆಗಿರುವ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್‌ನ ಗೌರವಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ದೀಪ ಬೆಳಗಿಸುವುದರ ಮೂಲಕ ದಸರಾ ಉತ್ಸವಕ್ಕೆ ಚಾಲನೆ ನೀಡುವರು.

ನವರಾತ್ರಿ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 15 ರಿಂದ 9 ದಿನಗಳ ಕಾಲ ಪ್ರತಿದಿನ ರಾತ್ರಿ 7.30 ರಿಂದ ದೇವಸ್ಥಾನದ ಪಾದಗಟ್ಟೆ ಹತ್ತಿರ ಶ್ರೀ ದೇವಿ ಪುರಾಣ - ಪ್ರವಚನ ಜರುಗಲಿದೆ. ಹಾವೇರಿ ಜಿಲ್ಲೆ ಹಾವನೂರು ತಾಲ್ಲೂಕಿನ ಕರಡಗಿ ಗ್ರಾಮದ ಹರಿಕಥಾ ವಿದ್ವಾನ್ ರೇವಣಸಿದ್ದಯ್ಯ ಶಾಸ್ತ್ರಿ ಮತ್ತು ಸಂಗಡಿಗರು ಪ್ರವಚನ ನಡೆಸಿಕೊಡುವರು.

ದಿನಾಂಕ 15ರ ಭಾನುವಾರ ಘಟಸ್ಥಾಪನೆ, ಶ್ರೀದೇವಿಗೆ ಹಂಸವಾಹನ ಅಲಂಕಾರ ಮಾಡಲಾಗುತ್ತದೆ. ದಿ. 16ರ ಸೋಮವಾರ ಹಂಸವಾಹನ ಅಲಂಕಾರ, ದಿ. 17ರ ಮಂಗಳವಾರ ವೃಷಭ ವಾಹನ ಅಲಂಕಾರ, ದಿ. 18ರ ಬುಧವಾರ ಮಯೂರ ವಾಹನ ಅಲಂಕಾರ, ದಿ. 19ರ ಗುರುವಾರ ಗರುಡ ವಾಹನ ಅಲಂಕಾರ, 20ರ ಶುಕ್ರವಾರ ಸರಸ್ವತಿ ಅಲಂಕಾರ, ದಿ. 21ರ ಶನಿವಾರ ಕಾಳಿ ಅಲಂಕಾರ, ದಿ. 22ರ ಭಾನುವಾರ ದುರ್ಗಾಷ್ಟಮಿ, ದುರ್ಗಾ ಅಲಂಕಾರ, ದಿ. 23ರ ಸೋಮವಾರ ಸಿಂಹ ವಾಹನ ಅಲಂಕಾರ ಮಾಡಲಾಗುತ್ತದೆ.



ದಿ. 23ರ ಸೋಮವಾರ ಬೆಳಿಗ್ಗೆ 10.30ಕ್ಕೆ ಕುಂಭಾಭಿಷೇಕ, ದಿ. 24ರ ಮಂಗಳವಾರ ಗಜಲಕ್ಷ್ಮಿ ಅಲಂಕಾರ, ವಿಜಯದಶಮಿ (ಬನ್ನಿ ಮುಡಿಯುವುದು), ದಿ. 25ರ ಬುಧವಾರ ಕಳಸ ಪೂಜೆ, ಬೆಳಿಗ್ಗೆ 11.30ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಆಯೋಜನೆಗೊಂಡಿವೆ.

ದಿ. 25ರ ಬುಧವಾರ ಸದ್ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಾಡಾಗಿದ್ದು, ಹಿರಿಯ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮನವರ ಜ್ಞಾಪಕಾರ್ಥವಾಗಿ ಅನ್ನ ಸಂತರ್ಪಣೆ ಸೇವೆ ಮಾಡಲಿದ್ದಾರೆ.

ದಿ. 25ರ ಬುಧವಾರ ಹಮ್ಮಿಕೊಂಡಿರುವ ಉಚಿತ ಸಾಮೂಹಿಕ ವಿವಾಹ ಮಹೋತ್ಸವದ ಸಾನ್ನಿಧ್ಯವನ್ನು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾ ಚಾರ್ಯ ಮಹಾಸ್ವಾಮೀಜಿ ವಹಿಸುವರು. ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಭಾಗವಹಿಸಲಿಚ್ಛಿಸುವವರು ಇದೇ ದಿ. 20ರೊಳಗೆ ದೇವಸ್ಥಾನದ ಕಛೇರಿಯಲ್ಲಿ ಹೆಸರು ನೋಂದಾಯಿಸಬಹುದು. ಸಾಮೂಹಿಕ ವಿವಾಹದಲ್ಲಿ 2 ಚಿನ್ನದ ತಾಳಿ, ಬೆಳ್ಳಿ ಕಾಲುಂಗರಕ್ಕೆ ಕೆಜಿಪಿ ಗೋಲ್ಡ್ ಪ್ಯಾಲೇಸ್‌ನ ಶ್ರೀಮತಿ ಸುರೇಖಾ ಗಣೇಶ್ ಡಿ. ಶೇಟ್ ಮತ್ತು ಎಂ.ಜಿ.ಎಸ್. ಜ್ಯುಯಲರ್ಸ್‌ನ ಶ್ರೀಮತಿ ಸವಿತಾ ಸುಬ್ರಹ್ಮಣ್ಯ ಡಿ. ಶೇಟ್ ದಾನಿಗಳಾಗಿದ್ದಾರೆ.

9 ದಿನಗಳ ದಸರಾ ಮಹೋತ್ಸವಕ್ಕೆ ಬೇಕಾಗುವ ವೀಳ್ಯದೆಲೆ ಸೇವೆಯನ್ನು ಗೌಡ್ರು ರಾಮಚಂದ್ರಪ್ಪ ಮತ್ತು ಸಹೋದರರು ಹಾಗೂ ಹೂವಿನ ಸೇವೆಯನ್ನು ಹೂವಿನ ವ್ಯಾಪಾರಿ ಬಿ. ರಾಮರೆಡ್ಡಿ ಮತ್ತು ಸಂಗಡಿಗರು ಮಾಡಿದ್ದಾರೆ.

ದಿ. 23ರ ಸೋಮವಾರ ನಡೆಯಲಿರುವ ಕುಂಭಾಭಿಷೇಕದಲ್ಲಿ ಭಾಗವಹಿಸಲಿಚ್ಛಿಸುವವರು ದೇವಸ್ಥಾನದಲ್ಲಿ ಹೆಸರು ನೋಂದಾಯಿಸಬಹುದು ಎಂದು ದೇವಸ್ಥಾನ ಟ್ರಸ್ಟ್ ಧರ್ಮದರ್ಶಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.

# ಪ್ರಗತಿಯಲ್ಲಿರುವ ಮುರುಘರಾಜೇಂದ್ರ ಬ್ಯಾಂಕಿಗೆ 2 ಶಾಖೆಗಳಿಗೆ ಅನುಮತಿ

### ಶ್ರೀ ಮುರುಘರಾಜೇಂದ್ರ ಬ್ಯಾಂಕಿನ 49ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಎಂ. ಜಯಕುಮಾರ್



ದಾವಣಗೆರೆ, ಅ. 11 - ಪ್ರತಿಷ್ಠಿತ ಸಹಕಾರ ಬ್ಯಾಂಕುಗಳಲ್ಲೊಂದಾದ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ತನ್ನ ಸೇವೆಯನ್ನು ಗ್ರಾಹಕರ ಹತ್ತಿರ ಕೊಂಡೊಯ್ಯುವ ನಿಟ್ಟಿನಲ್ಲಿ ಎರಡು ಶಾಖೆಗಳನ್ನು ತೆರೆಯಲು ನಿರ್ಧರಿಸಿದೆ ಎಂದು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎಂ. ಜಯಕುಮಾರ್ ತಿಳಿಸಿದ್ದಾರೆ.

ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕಿನ 2022-23ನೇ ಸಾಲಿನ 49ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎರಡು ಶಾಖೆಗಳನ್ನು ಆರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದ್ದು ಈ ಹಿನ್ನೆಲೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನ ಮಾಮಾಸ್ ಜಾಯಿಂಟ್ ರಸ್ತೆಯಲ್ಲಿ ಮತ್ತು ಹಳೇ ಊರಿನ ಭಾಗದ ಕಾಯಿಪೇಟೆಯಲ್ಲಿ ಶಾಖೆಗಳನ್ನು ತೆರೆಯುವ ಸಂಬಂಧ ಸೂಕ್ತ ಸ್ಥಳ ಪರಿಶೀಲನೆ ಕಾರ್ಯ ನಡೆದಿದೆ ಎಂದು ಅವರು ಹೇಳಿದರು.

ತಮ್ಮ ಬ್ಯಾಂಕ್ ಆರ್ಥಿಕ ಪ್ರಗತಿಯೊಂದಿಗೆ ಬಲಿಷ್ಠವಾಗಿದ್ದು, ತನ್ನ ಸ್ಥಾಪನೆಯ 50ನೇ ವರ್ಷದ ಸುವರ್ಣ ಮಹೋತ್ಸವದತ್ತ ಸಾಗುತ್ತಿದೆ. ಸಾರ್ವಜನಿಕರ ಪ್ರೋತ್ಸಾಹದಿಂದ ಸದೃಢ ಬ್ಯಾಂಕ್ ಎಂಬ ಮೆಚ್ಚುಗೆ ಪಡೆದು ಮುನ್ನಡೆದಿದೆ ಎಂದು ಜಯಕುಮಾರ್ ಸಂತಸ ವ್ಯಕ್ತಪಡಿಸಿದರು.

2023ನೇ ಮಾರ್ಚ್ ಅಂತ್ಯಕ್ಕೆ 1.34 ಕೋಟಿ ರೂ. ಷೇರು ಬಂಡವಾಳ ಹೊಂದಿದೆ. 1.43 ಕೋಟಿ ರೂ. ಕಾಯ್ದಿಟ್ಟ ನಿಧಿ 67 ಲಕ್ಷ ರೂ. ಇತರೆ ನಿಧಿಗಳಾಗಿದ್ದು, 32.59 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಸದಸ್ಯರ ಅಗತ್ಯಗನುಗುಣವಾಗಿ 18 ಕೋಟಿ ರೂ. ಸಾಲ-ಸೌಲಭ್ಯ ಒದಗಿಸಲಾಗಿದ್ದು, 37 ಕೋಟಿ ರೂ. ದುಡಿಯುವ ಬಂಡವಾಳವಾಗಿರುತ್ತದೆ. 37 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಷೇರುದಾರರಿಗೆ ಶೇ. 12ರಂತೆ ಲಾಭಾಂಶ ನೀಡಲು ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ಷೇರುದಾರರ ಚಪ್ಪಾಳೆಗಳ ಮಧ್ಯೆ ಜಯಕುಮಾರ್ ಘೋಷಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಎಸ್. ಓಂಕಾರಪ್ಪ ಮಾತನಾಡಿ, ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರ ಹಿತಾಸಕ್ತಿ, ಸಿಬ್ಬಂದಿ ವರ್ಗದವರ ಶ್ರಮ, ಷೇರುದಾರರು ಮತ್ತು ಠೇವಣಿದಾರರ ಸದಾ ಪ್ರೋತ್ಸಾಹ, ಹಿತೈಷಿಗಳು ಮತ್ತು ಸಾರ್ವಜನಿಕರ ಹಾರೈಕೆಯಿಂದಾಗಿ ತಮ್ಮ ಬ್ಯಾಂಕ್ ಪ್ರಗತಿಯನ್ನು ಕಾಯ್ದುಕೊಂಡು ಮುನ್ನಡೆದಿದೆ ಎಂದು ತಿಳಿಸಿ, ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ನಿರ್ದೇಶಕ ಮಹೇಶ್ ಜಿ. ಶೇಂಡಗಿ ಅವರು ಆಯ-ವ್ಯಯ ಮಂಡಿಸಿದರು.

ಮಾಜಿ ಶಾಸಕರೂ ಆಗಿರುವ ಬ್ಯಾಂಕಿನ ನಿರ್ದೇಶಕ ಎಸ್.ವಿ. ರಾಮಚಂದ್ರಪ್ಪ, ನಿರ್ದೇಶಕರುಗಳಾದ ಕೆ. ಆರ್. ಪರಮೇಶ್ವರಪ್ಪ, ಕೆ.ಜಿ. ಚನ್ನಬಸಪ್ಪ, ಎಂ.ಎಸ್. ಶಿವಯೋಗಿ, ಎನ್. ನೀಲಗಿರಿ, ಕೆ.ಎಸ್. ಸತೀಶ್, ಶ್ರೀಮತಿ ಜಿ.ಬಿ. ಮಂಗಳ ಬೂಸ್ನೂರು, ಸೋಗಿ ಎಸ್. ಶಮಂತ್, ವಿಶೇಷ ಆಹ್ವಾನಿತರಾದ ಕಣಕುಪ್ಪಿ ಮುರುಗೇಶಪ್ಪ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಗಪ್ಪ ಮಲ್ಲಪ್ಪ ತೋಟದ್ ಅವರ ಪ್ರಾರ್ಥನೆ ನಂತರ ನಿರ್ದೇಶಕ ಹೆಚ್.ವಿ. ಮಂಜುನಾಥಸ್ವಾಮಿ ಸ್ವಾಗತಿಸಿದರು. ನಿರ್ದೇಶಕರಾದ ಶ್ರೀಮತಿ ಜ್ಯೋತಿ ಆರ್. ಜಂಬಗಿ ವಂದಿಸಿದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಅವರು ಸಭೆಯಲ್ಲಿ ಪಾಲ್ಗೊಂಡು ಬ್ಯಾಂಕಿನ ಅಧ್ಯಕ್ಷ ಎಂ. ಜಯಕುಮಾರ್ ಮತ್ತು ಉಪಾಧ್ಯಕ್ಷ ಎಸ್. ಓಂಕಾರಪ್ಪ ಅವರುಗಳನ್ನು ಶಾಲು ಹೊದಿಸಿ, ಸನ್ಮಾನಿಸುವುದರ ಮೂಲಕ ಮುರುಘರಾಜೇಂದ್ರ ಬ್ಯಾಂಕ್ ಅನ್ನು ಇನ್ನೂ ಹೆಚ್ಚಿನ ಪ್ರಗತಿಯತ್ತ ಕೊಂಡೊಯ್ಯುವಂತೆ ಹಾರೈಸಿದರು.

ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕ ಎಸ್.ಪಿ. ವೀರಭದ್ರಪ್ಪ, ಪ್ರಭಾರ ವ್ಯವಸ್ಥಾಪಕ ಎಂ.ಎಸ್. ಅರುಣ ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

## ನಗರದ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ



ದಾವಣಗೆರೆ, ಅ. 11- ಸ್ಥಳೀಯ ಕೆಟಿಜೆ ನಗರ, ಮೂರನೇ ಮುಖ್ಯರಸ್ತೆ, 11 ಮತ್ತು 12ನೇ ತಿರುವಿನಲ್ಲಿರುವ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ನಾಡಹಬ್ಬ ದಸರಾ ಮಹೋತ್ಸವವು ಇದೇ ದಿನಾಂಕ 15 ರ ಭಾನುವಾರ ಆರಂಭವಾಗಲಿದ್ದು, 9 ದಿನಗಳ ಕಾಲ ನಡೆಯಲಿದೆ.

ದಿ. 15ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಅಮ್ಮನವರ ಗಂಗಾಪೂಜೆ ಹರಿಹರದಲ್ಲಿ ಏರ್ಪಾಡಾಗಿದ್ದು, ಅದೇ ದಿನ ಸಂಜೆ 7 ಗಂಟೆಗೆ ಶ್ರೀದೇವಿ ಘಟಸ್ಥಾಪನೆ ಮತ್ತು ದೀಪ ಹಾಕುವ ಕಾರ್ಯಕ್ರಮ ಜರುಗಲಿದೆ.

ದಿ. 22ರ ಭಾನುವಾರ ಮುಂಜಾನೆ ದುರ್ಗಾಷ್ಟಮಿಯಂದು ಚಂಡಿಕಾ ಹೋಮ ಮತ್ತು ಅನ್ನ ಸಂತರ್ಪಣೆ ಆಯೋಜನೆಗೊಂಡಿದೆ.

ದಿ. 23ರ ಸೋಮವಾರ ಆಯುಧ ಪೂಜೆ, ದಿ. 24ರ ಮಂಗಳವಾರ ಸಂಜೆ 4.30ಕ್ಕೆ ಬನ್ನಿ ಮುಡಿಯುವುದು, ಅಂಬುಛೇದನ, ಪಲ್ಲಕ್ಕಿ ಉತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ 22ರ ಭಾನುವಾರ ಏರ್ಪಾಡಾಗಿರುವ ಚಂಡಿಕಾ ಹೋಮದಲ್ಲಿ ಭಾಗವಹಿಸಲಿಚ್ಛಿಸುವ ಭಕ್ತಾದಿಗಳು ದೇವಸ್ಥಾನದಲ್ಲಿ ಹೆಸರು ನೋಂದಾಯಿಸಬಹುದು.

## ವಿದ್ಯಾನಗರ ಲಯನ್ಸ್ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ ಹೆಚ್.ಎನ್. ಶಿವಕುಮಾರ್



ದಾವಣಗೆರೆ, ಅ. 11 - ಸ್ಥಳೀಯ ವಿದ್ಯಾನಗರ ಲಯನ್ಸ್ ಕ್ಲಬ್‌ನ ಅಂಗ ಸಂಸ್ಥೆ ವಿದ್ಯಾನಗರ ಲಯನ್ಸ್ ಸೇವಾ ಟ್ರಸ್ಟ್ ಗೌರವ ಅಧ್ಯಕ್ಷರಾಗಿ ಡಾ. ಜಿ. ಶಿವಲಿಂಗಪ್ಪ, ಅಧ್ಯಕ್ಷರಾಗಿ ಹೆಚ್.ಎನ್. ಶಿವಕುಮಾರ್, ಕಾರ್ಯದರ್ಶಿಯಾಗಿ ಎಸ್.ಬಸವರಾಜ್, ಖಜಾಂಚಿಯಾಗಿ ಪಿ. ಮಹೇಂದ್ರಕುಮಾರ್ ಆಯ್ಕೆಯಾಗಿದ್ದಾರೆ. ಎಸ್.ಎಸ್. ಬಕ್ಕೇಶ್, ಕುಮಾರಪ್ಪ (ಆಡಿಟರ್), ಎಲ್.ಎಸ್. ಪ್ರಭುದೇವ್, ಬಿ.ದಿಳ್ಯಪ್ಪ, ಎಂ.ಎ ಸುದರ್ಶನ ಕುಮಾರ್, ಡಾ. ಜಿ.ಎನ್.ಹೆಚ್. ಕುಮಾರ್ ಹಾಗೂ ಯು.ಆರ್. ಅರವಿಂದ ಅವರುಗಳು ಟ್ರಸ್ಟಿಗಳಾಗಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪೊಲೀಸ್ ಕ್ವಾರ್ಟ್ರರ್ಸ್, ಮುದ್ದಳ್ಳಿ ತೋಟ, ಪೊಲೀಸ್ ಕ್ವಾರ್ಟ್ರರ್ಸ್ ಎಮ್.ಎಸ್ ಬಿಲ್ಡಿಂಗ್, ಪೊಲೀಸ್ ಡಿ.ಎ.ಆರ್ ಆಫೀಸ್, ಜೊಳ್ಳಿ ಕಾಂಪೌಂಡ್, ವಿನೋಬ ನಗರ, 1ನೇ ಮೇನ್ ಚರ್ಚ್‌ರಸ್ತೆ, ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನೀತಾ ಹರ್ಷಗೌಡರ್ ಅದ್ವಿತೀಯ ಸಾಧನೆ



ದಾವಣಗೆರೆ, ಅ.11- ನೀತಾ ಹರ್ಷ ಗೌಡರ್ ಅವರು ಕ್ವಿಲ್ಲಿಂಗ್ ಕಲೆಯ ಮೂಲಕ ಅತಿ ಹೆಚ್ಚು ಗಣೇಶ ಮೂರ್ತಿಗಳನ್ನು ರೂಪಿಸಿ ದಾಖಲೆ ಮಾಡಿರುವುದಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ತಿಳಿಸಿದೆ. ನೀತಾ ಅವರು ಕ್ವಿಲ್ಲಿಂಗ್ ಬಣ್ಣದ ಕಾಗದ, ಸೂಜಿ, ಅಚ್ಚು ಹಾಗೂ ಕಲ್ಲುಗಳನ್ನು ಬಳಸಿ 121 ಗಣೇಶ ಮೂರ್ತಿಗಳನ್ನು ರೂಪಿಸಿ ದ್ದಾರೆ. ಪ್ರತಿಯೊಂದು 4.5 x 5 ಸೆಂ.ಮೀ. ಗಾತ್ರದ್ದಾಗಿದೆ.

# ಬೀದಿನಾಯಿಗಳ ಬೊಗಳುವಿಕೆಗೆ ಬೇಸತ್ತ ಜನತೆ



### ನಾಯಿಗಳ ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ ವಹಿಸಿದ ಮಹಾನಗರ ಪಾಲಿಕೆ

ದಾವಣಗೆರೆ, ಅ.11- ಬೀದಿ ನಾಯಿಗಳ ಹಾವಳಿಗೆ ಹೈರಾಣಾಗಿರುವ ಜನತೆ, ಇದೀಗ ರಾತ್ರಿಯಾಗುತ್ತಲೇ ಅವುಗಳ ಬೊಗಳುವಿಕೆ ತಾಳಲಾರದೇ ಬೇಸತ್ತು ಹೋಗಿದ್ದಾರೆ.

ಇಲ್ಲಿನ ತರಳಬಾಳು ನಗರ, ವಿದ್ಯಾನಗರ, ಶಿವಕುಮಾರ ಸ್ವಾಮಿ ಬಡಾವಣೆ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ರಾತ್ರಿ ಎಂಟು ಗಂಟೆಯಾಗುತ್ತಲೇ ನಾಯಿಗಳ ಬೊಗಳುವಿಕೆ ಆರಂಭವಾಗುತ್ತದೆ. ಪರಸ್ಪರ ಕಿತ್ತಾಡಿಕೊಂಡು ಬೊಗಳುವುದು ಒಂದು ರೀತಿಯ ಇಸ್ರೇಲ್ ಹಾಗೂ ಪ್ಯಾಲಿಸ್ತೇನ್ ಯುದ್ಧ ನೆನಪಿಸುತ್ತದೆ ಎಂದು ತರಳಬಾಳು ನಿವಾಸಿಗಳು ದೂರಿದ್ದಾರೆ.

ನಮಗೆ ಓದಲು ಈ ಬೀದಿ ನಾಯಿಗಳಿಂದ ಕಿರಿ ಕಿರಿಯಾಗುತ್ತದೆ ಎಂಬುದು ವಿದ್ಯಾರ್ಥಿಗಳ ಅಳಲಾ ದರೆ, ಬೇಗ ಮಲಗೋಣ ಎಂದರೆ ನಾಯಿಗಳು ಬಿಡುತ್ತಿಲ್ಲ ಎಂಬುದು ಹಿರಿಯರ ದೂರು. ಪ್ರತಿ ಬಡಾವಣೆಯ ರಸ್ತೆಯಲ್ಲಿ ಗುಂಪು ಗುಂಪಾಗಿ ತಿರುಗಾಡುವ ಈ ಶ್ವಾನಗಳಿಂದಾಗಿ ಚಿಕ್ಕ ಮಕ್ಕಳನ್ನು ಹೊರಗೆ ಕಳುಹಿಸಲು ಪೋಷಕರು ಭಯ ಪಡುವಂತಾಗಿದೆ. ರಾತ್ರಿ ಕೆಲಸ ಕಾರ್ಯ ಮುಗಿಸಿಕೊಂಡು ಮನೆಯತ್ತ ತೆರಳುವವರ ಮೇಲೆ ನಾಯಿಗಳು ದಾಳಿ ನಡೆಸುತ್ತಿ ರುವುದರಿಂದ ಭಯದಿಂದಲೇ ಸೈಕಲ್ಲು, ಬೈಕುಗಳನ್ನು ಓಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಮಾಡಲಾಗುತ್ತದೆ ಎಂದು ಮಹಾನಗರ ಪಾಲಿಕೆ ಹೇಳುತ್ತಿದೆಯಾದರೂ, ಸಮರ್ಪಕವಾಗಿ ನಡೆಯುತ್ತಿಲ್ಲ.

ಈ ಹಿನ್ನೆಲೆಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದೆ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಇನ್ನಾದರೂ ಮಹಾನಗರ ಪಾಲಿಕೆ ಅಧಿಕಾರಿಗಳು ನಾಯಿಗಳ ಹಾವಳಿಯಿಂದ ಮುಕ್ತಿ ನೀಡಲಿ ಎಂಬುದು ನಗರವಾಸಿಗಳ ಆಶಯವಾಗಿದೆ.

## ನಗರದಲ್ಲಿ ಇಂದು ಅಂಚೆ ವಿಭಾಗೀಯ ಅದಾಲತ್


ಗಡಿಯಾರ ಕಂಬದ ಹತ್ತಿರದಲ್ಲಿರುವ ಪ್ರಧಾನ ಅಂಚೆ ಕಚೇರಿ 1ನೇ ಮಹಡಿಯ ಜಿಲ್ಲಾ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಇಂದು ಸಂಜೆ ಅಂಚೆ ವಿಭಾ ಗೀಯ ಡಾಕ್ ಅದಾಲತ್ತನ್ನು ಆಯೋಜಿಸಲಾಗಿದೆ ಎಂದು ಅಂಚೆ ಅಧೀಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ.

## ಐಎಫ್‌ಎಸ್ ಅಧಿಕಾರಿ ಹರಗನಹಳ್ಳಿ ಗ್ರಾಮದ ಡಾ. ಸಿ. ಮಂಜುನಾಥ್ ಸಾವು

ಹೊನ್ನಾಳಿ, ಅ.11- ಮೇಘಾಲಯ ಸರ್ಕಾರದಲ್ಲಿ ಪ್ರಾಣಿ ಮತ್ತು ಪಶುಸಂಗೋಪನೆ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಹೊನ್ನಾಳಿ ತಾಲ್ಲೂಕಿನ ಹರಗನಹಳ್ಳಿ ಗ್ರಾಮದ ಟಿ. ಚನ್ನಬಸಪ್ಪನವರ ಪುತ್ರ ಹಾಗೂ ಐಎಫ್‌ಎಸ್ ಅಧಿಕಾರಿ ಡಾ. ಸಿ. ಮಂಜುನಾಥ್ (46) ಅವರು ಹೃದಯಾಘಾತದಿಂದ ನಿನ್ನೆ ನಿಧನರಾಗಿದ್ದಾರೆ.

ಮೇಘಾಲಯ ಸಿಎಂ ಸೇರಿದಂತೆ ಸಚಿವರು, ಉನ್ನತ ಅಧಿಕಾರಿಗಳು ಡಾ. ಮಂಜುನಾಥ್ ಅವರ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ. ಅಲ್ಲದೇ ಮಂಜುನಾಥ್ ಅವರ ಅಂತಿಮ ದರ್ಶನ ಪಡೆದಿದ್ದಾರೆ.

ವಿಷಯ ತಿಳಿದ ತಕ್ಷಣ ಹರಗನಹಳ್ಳಿಯಿಂದ ಅವರ ಅಣ್ಣ ಮತ್ತು ಸಂಬಂಧಿಕರು ಮೇಘಾಲಯಕ್ಕೆ ತೆರಳಿ ಶವ ಪರೀಕ್ಷೆ ಮುಗಿಸಿಕೊಂಡು ಪಾರ್ಥಿವ ಶರೀರವನ್ನು ಬುಧವಾರ ತಡರಾತ್ರಿ ವಿಮಾನದ ಮೂಲಕ ಬೆಂಗಳೂರಿಗೆ ತಂದು, ಅಲ್ಲಿಂದ ವಿಶೇಷ ವಾಹನದಲ್ಲಿ ಹೊನ್ನಾಳಿ ತಾಲ್ಲೂಕು ಹರಗನಹಳ್ಳಿಗೆ ತರಲಿದ್ದಾರೆ.



ಇನ್ನೆರಡು ದಿನಗಳಲ್ಲಿ ತಮ್ಮ 3 ತಿಂಗಳ ಹೆಣ್ಣು ಮಗುವನ್ನು ನೋಡಲು ಶಿವಮೊಗ್ಗಕ್ಕೆ ಬರುತ್ತೇನೆಂದು ಹೇಳಿದ್ದರೆಂದು ಪತ್ನಿ ನೆನೆಪಿಸಿಕೊಂಡು ದುಃಖಪಡುತ್ತಿದ್ದಾರೆ. ತಂದೆ, ತಾಯಿ, ಸಹೋದರರು, ಸಹೋದರಿ ಸೇರಿದಂತೆ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ ಹರಗನಹಳ್ಳಿಯಲ್ಲಿ ನೆರವೇರಲಿದೆ ಎಂದು ತಿಳಿದು ಬಂದಿದೆ.

## ನಗರದಲ್ಲಿ ಇಂದು ಚಿಂತನೆ- ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 6 ರಿಂದ 7 ರವರೆಗೆ ಟ್ರಸ್ಟ್ ಸಭಾಂಗಣದಲ್ಲಿ 'ಚಿಂತನೆ ಮತ್ತು ಸಂವಾದ' ನಡೆಯಲಿದೆ.

'ಬುದ್ಧನ ತತ್ವನುಷ್ಠಾನದಿಂದ ಆನಂದಮಯ ಜೀವನ' ಕುರಿತು ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ವಿಷಯ ಮಂಡಿಸಲಿದ್ದಾರೆ.

ಜಿ.ಬಿ. ನಾಗನಗೌಡ್ರು, ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್, ಆವರಗೆರೆ ರುದ್ರಮುನಿ, ಕಲೀಂಬಾಷಾ, ಭಿಕ್ಷಾವರ್ತಿ ಮಠ ಮತ್ತಿತರರು ಭಾಗವಹಿಸಲಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ

### ಶ್ರೀ ಪೃಥ್ವಿರಾಜ್ ವಿ.

ದಿನಾಂಕ 11-10-2023ರಂದು ಧರ್ಮದ ಕಾಯಕದಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಅಕಾಲಿಕವಾಗಿ ನಿಧನರಾದ ನಿಮಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ನಿಮ್ಮ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



**ಸಾರ್ವಜನಿಕ ಹಿಂದೂ ಮಹಾಗಣಪತಿ ಟ್ರಸ್ಟ್, ದಾವಣಗೆರೆ.**


ದಾವಣಗೆರೆ ಪೆಟ್ ಕೇರ್
DAVANGERE PET CARE

FREE PET HEALTH CAMP
- Free Consultation
- Free anti-rabies vaccination
- Free deworming
- Free nutritional advice

CAMP DATE AND TIMING
OCTOBER 14TH & 15TH
SATURDAY & SUNDAY
10 TO 5 PM



SPECIAL OFFER :
- 20% Discount on all treats & Accessories
- 20% Discount on Selected Royal Canin Food
- 15% Discount on drools food
- Lucky draw hamper worth Rs 1500/- for 3 Dogs and 3 Cats

LUCKY 5
Your pet buddy can win once free bath session this year
MORE GIFT ARE AWAITING FOU YOU AND YOUR PET AS A TOKEN OF GRATITUDE AND LOVE FROM DAVANGERE PET CARE AND OUR SPONSORERS

To avail above offer T&C:
1. Registration fee to participate in camp Rs. 100/-
2. Minimum Billng Rs. 500/- to Avail Discount

☎ 86606 24350

# 3680/07 C/o. 'SANCHARU', Bapuji Medical Boys Hostel Road, 7th Main, MCC 'B' Block, Davangere.



ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

• ಮೆಡಿಕಲ್ ಆಂಕೊಲಾಜಿಸ್ಟ್
ಡಾ॥ ನಮ್ರತಾ ಉಡುಪ: ಪ್ರತಿ ಗುರುವಾರ
ಡಾ॥ ಈರಪ್ಪ ಮದಭಾವಿ: ಪ್ರತಿ ಶನಿವಾರ

• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
ಡಾ॥ ಹರೀಶ್ ಕೆ ಆರ್: ಪ್ರತಿ ಗುರುವಾರ

• ಸರ್ಜಿಕಲ್ ಆಂಕೊಲಾಜಿಸ್ಟ್
ಡಾ॥ ನಿಶ್ಚಲ್ – ಸೋಮವಾರದಿಂದ ಶನಿವಾರದ ವರೆಗೆ

• ರೇಡಿಯೇಷನ್ ಆಂಕೊಲಾಜಿಸ್ಟ್
ಡಾ॥ ಶರಶ್ಚಂದ್ರ – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ



"ಆಯುಷ್ಮಾನ್ ಭಾರತ್ ಹಾಗೂ ಯಶಸ್ವಿನಿ ಯೋಜನೆಯಡಿ ಕ್ಯಾನ್ಸರ್ ಚಿಕಿತ್ಸೆಗಳು ಲಭ್ಯವಿದೆ."

ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111